
# ಕಾವ್ಯಧಾರೆ




ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2014

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

# ಕಾವ್ಯಧಾರೆ

(ಬಹುಭಾಷಾ ಕವನ ಸಂಕಲನ)

BVP-1058-9/1/17
(G)-964-5/87

ಮಡಿಕೇರಿ ಜನೋತ್ಸವ
ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2014
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
30-09-2014

**KAVYADHAARE**

An anthology of poems published by Dasara Bahubasha Kavigosti Samithi, Madikeri.

First Edition : 2014

All Rights Reserved


ಪುಟ : 60

ವಿನ್ಯಾಸ ಮತ್ತು ರೇಖಾ ಚಿತ್ರ : ಸತೀಶ್ ಬಿ.ಆರ್.

ಮುದ್ರಣ : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ - 571 201
☎: 228829, 229202


# ಕಾವ್ಯಧಾರೆ

ಮಡಿಕೇರಿ ಜನೋತ್ಸವ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ ವತಿಯಿಂದ ಪ್ರಕಟಿಸಲಾದ
ಕವನ ಸಂಕಲನ



# ಮುನ್ನುಡಿ

**ಪ್ರ**ತಿ ದಸರಾ ಹಬ್ಬದ ಸಂದರ್ಭದಲ್ಲೂ ಕವಿಗೋಷ್ಠಿಯ ಕುರುಹಾಗಿ ಒಂದು ಕವನ ಸಂಕಲನ ಹೊರ ಬರುತ್ತಿರುವದು ಸಂತೋಷದ ವಿಚಾರ. ಈ ನೆವದಲ್ಲಾದರೂ ಕೊಡಗಿನಲ್ಲಿ ಒಮ್ಮೆ ನಾವು ಕಾವ್ಯದ ಕುರಿತು ಆರೋಗ್ಯಪೂರ್ಣ ಚರ್ಚೆ ನಡೆಸುತ್ತಿದ್ದೇವಲ್ಲಾ ಅದಕ್ಕೆ ಹೆಮ್ಮೆ ಪಡೋಣ. ಕಾವ್ಯ ಎನ್ನುವದು ಸಂವೇದನಾಶೀಲರ ಜಗತ್ತು. ಕನ್ನಡ ಕಾವ್ಯ ಕ್ಷೇತ್ರ ಸಮೃದ್ಧವಾಗಿ ಬೆಳೆದಿದೆ. ಜಾಗತಿಕ ಮಟ್ಟದಲ್ಲಿ ನಿಲ್ಲಬಲ್ಲ ಹಲವು ಶ್ರೇಷ್ಠ ಕವನಗಳು ನಮ್ಮ ಕನ್ನಡದಲ್ಲೂ ರಚನೆಗೊಂಡಿದೆ. ಕಾಲದ ಅವಶ್ಯಕತೆಗಳಿಗೆ ತಕ್ಕಂತೆ ಕನ್ನಡ ಕಾವ್ಯ ಪರಿವರ್ತನೆ ಕಂಡಿದೆ. ಬೆಳೆದಿದೆ.

ಕಾವ್ಯಧಾರೆ ಹಲವು ಕವಿಗಳ ಕನಸು, ಚಿಂತನೆ ಮತ್ತು ಬಾಳಿನ ಕುರಿತಾದ ಒಳನೋಟಗಳಿಗೆ ಕನ್ನಡಿ ಹಿಡಿದಿರುವ ಸಂಕಲನ, ಇಲ್ಲಿ ವಿಭಿನ್ನ ಅಭಿರುಚಿಯ, ಬೇರೆ ಬೇರೆ ಮನೋಧರ್ಮದ ಕವಿಗಳಿದ್ದಾರೆ. ಸಂಖ್ಯೆಯನ್ನು ಗಮನಿಸಿದರೆ ಕವಿಗಳಿಗಿಂತ ಕವಯತ್ರಿಯರ ಸಂಖ್ಯೆ ಹೆಚ್ಚು ಕಾಣುತ್ತದೆ. ಆದರೆ, ಸಂಖ್ಯೆ ಮತ್ತು ಆಸಕ್ತಿ ಗುಣಮಟ್ಟಕ್ಕೆ ಮಾನದಂಡ ಎನ್ನಲಾಗದು. ಕಾವ್ಯ ವಸ್ತುವಿನ ಆಯ್ಕೆಯಲ್ಲಿ ನಾವು ಹೊಸತನ ಕಾಣಬಹುದು. ಅತ್ಯಾಚಾರದಂಥ ತೀರ ಸಮಕಾಲೀನ ವಿದ್ಯಮಾನಕ್ಕೆ ಕವಿಗಳು ತೀವ್ರ ರೂಪದ ಪ್ರತಿಕ್ರಿಯೆಯನ್ನು ತೋರಿರುವದನ್ನು ಇಲ್ಲಿ ಗುರುತಿಸಬಹುದು. ಆದರೆ, ಆಯ್ದುಕೊಂಡ ವಸ್ತು ಕಾವ್ಯ ಆಗಿದೆಯೇ ಎಂಬ ಪ್ರಶ್ನೆ ನಮ್ಮನ್ನು ಖಂಡಿತವಾಗಿಯೂ ಕಾಡುತ್ತದೆ.

ಪದ್ಯದ ಹಾಗೆ ಬರೆದ ಮಾತ್ರಕ್ಕೆ ಅದು ಕಾವ್ಯವಾಗುವದಿಲ್ಲ. ವಾರ್ತೆ ಬೇರೆ ಕಾವ್ಯ ಬೇರೆ. ಕಾವ್ಯದ ಭಾಷೆ ದೈನಂದಿನ ಭಾಷೆಗಿಂತ ಭಿನ್ನ ಎಂದು ಇಲ್ಲಿ ತಿಳಿದವರು ಬೆರಳೆಣಿಕೆಯ ಕವಿಗಳು ಮಾತ್ರ. ಕನ್ನಡ ಕಾವ್ಯಗಳ ಓದಿನ ಕೊರತೆ ಇಡೀ ಸಂಕಲನದಲ್ಲಿ ಢಾಳವಾಗಿ ಕಾಣಿಸುತ್ತದೆ. ಉತ್ತಮ ಕವನ ಬೆಳೆಯುತ್ತ ಹೋಗುತ್ತದೆ. ಆ ಕೊರತೆಯೂ ಇಲ್ಲಿದೆ. ಕಾವ್ಯ ರಚನೆಯ ಹಿಂದೆ ಇರಬೇಕಾದ ಧ್ಯಾನ ಇಲ್ಲಿಯ ಕವನಗಳಲ್ಲಿಲ್ಲ. ಕಾವ್ಯದ ನಿಲುವು ಕಾಲಕಾಲಕ್ಕೆ ಬದಲಾಗುತ್ತದೆ. ಹೌದು ಆದರೆ, ಉತ್ತಮ ಕಾವ್ಯವನ್ನು ತಮ್ಮ ಕಾಲದ ಎಲ್ಲಾ ಪೂರ್ವಾಗ್ರಹಗಳನ್ನೂ ಮೀರಿ ಜನ ಸ್ವೀಕರಿಸುತ್ತಾರೆ ಎಂಬ ಜಾಗೃತ ಮನಸ್ಸು ನಮಗಿರಬೇಕಾಗುತ್ತದೆ.

ಈ ಕಾವ್ಯಧಾರೆ ಸಂಕಲನ ಕೊಡಗಿನ ಎಳೆಯ ಕವಿ ಪ್ರತಿಭೆಗಳಿಗೆ ಹಲವು ನೆಲೆಗಳಲ್ಲಿ ಪ್ರೇರಕವಾಗಲಿ ಎಂದು ಹಾರೈಸುವೆ. ಕವಿಗಳು ಇಲ್ಲಿ ಇರಿಸಿರುವ ಹೆಜ್ಜೆ ಆರೋಗ್ಯ ಪೂರ್ಣವಾದುದು ಮತ್ತು ದೃಢವಾದುದು. ಅದು ನಿಂತ ನೀರಾಗಬಾರದು. ಹರಿಯುವ ಝರಿಯಾಗಬೇಕು ಎಂದು ನನ್ನ ಕೋರಿಕೆ.



ಸುಬ್ರಾಯ ಸಂಪಾಜೆ,
ಆಕಾಶವಾಣಿ

# ಹರುಷದಲಿ ನಿಮ್ಮೊಂದಿಗೆ

ಐತಿಹಾಸಿಕ ಹಿನ್ನೆಲೆಯೊಂದಿಗೆ ಜನೋತ್ಸವವಾಗಿ ಶಕ್ತಿ ದೇವತೆಗಳ ಆರಾಧನೆಯೊಂದಿಗೆ ಆಚರಿಸಲ್ಪಡುವ ಮಡಿಕೇರಿ ದಸರಾ ವರ್ಷದಿಂದ ವರ್ಷಕ್ಕೆ ತನ್ನ ಖ್ಯಾತಿಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಇತ್ತೀಚಿನ ವರ್ಷಗಳಲ್ಲಂತೂ ಕೊಡಗಿಗೆ ಪ್ರವಾಸಿಗರ ಭೇಟಿ ಹೆಚ್ಚಾಗುತ್ತಿದ್ದು ಅದರಲ್ಲೂ ದಸರಾ ಸಂದರ್ಭ ಜನ ಸಾಗರವೇ ಹರಿದು ಬರುತ್ತಿದೆ. ಸಾಂಸ್ಕೃತಿಕ ಧಾರ್ಮಿಕ ಕ್ರೀಡೆ ಸೇರಿದಂತೆ ವಿವಿಧ ಚಟುವಟಿಕೆಗಳ ಸಮ್ಮಿಲನದೊಂದಿಗೆ ಸಾಹಿತ್ಯಕ್ಕೂ ಒತ್ತು ನೀಡುವ ನಿಟ್ಟಿನಲ್ಲಿ ಬಹುಭಾಷೆಗಳ ಸಂಗಮದೊಂದಿಗೆ ಬಹುಭಾಷಾ ಕವಿಗೋಷ್ಠಿಯೂ ಮಡಿಕೇರಿ ದಸರಾದ ಒಂದು ಪ್ರಮುಖ ಕಾರ್ಯಕ್ರಮವಾಗಿದೆ.

ಈ ಬಾರಿಯೂ ಕವಿಗೋಷ್ಠಿಗೆ ಕವನ ಆಹ್ವಾನಿಸಿದ ಸಂದರ್ಭ ವಿವಿಧ ಭಾಷೆಗಳ ಕವಿ ಹೃದಯರಿಂದ ಉತ್ತಮ ರೀತಿಯ ಸ್ಪಂದನೆ ವ್ಯಕ್ತಗೊಂಡಿತು. ವಿಶೇಷವೆಂದರೆ ಈ ಬಾರಿ ಭಾಷೆಯ ಸಂಖ್ಯೆ ಏರಿಕೆ ಕಂಡಿರುವದು ಕಳೆದ ವರ್ಷ ಒಟ್ಟು 10 ಭಾಷೆಯಲ್ಲಿ ಕವನಗಳು ಬಂದಿದ್ದರೆ ಈ ಬಾರಿ 14 ಭಾಷೆಗಳಲ್ಲಿ ಕವನ ಬಂದಿರುವದು ಸಮಿತಿಗೆ ಹರ್ಷ ತಂದಿದ್ದು 14 ಭಾಷೆಗಳ ಕವನಗಳನ್ನು "ಕಾವ್ಯಧಾರೆ"ಯಲ್ಲಿ ಪ್ರಕಟಿಸಲಾಗಿದೆ. ವಿವಿಧ ಚಿಂತನೆ ಭಾವನೆಗಳನ್ನು ಪ್ರತಿ ಬಿಂಬಿಸಿರುವ ಕವನ ಸೃಷ್ಟಿಕರ್ತರ ಹೃದಯಾಂತರಾಳ ಇಲ್ಲಿದೆ.

ಆಯ್ಕೆದಾರರ ಅಭಿಪ್ರಾಯದಂತೆ ಕವನಗಳನ್ನು ಆಯ್ಕೆ ಮಾಡಲಾಗಿದ್ದು, 41 ಕವನಗಳನ್ನು ಪ್ರಕಟಮಾಡಲಾಗಿದೆ.

"ಕಾವ್ಯಧಾರೆ" ಮೂಡಿಬರಲು ಮಡಿಕೇರಿ ನಗರ ದಸರಾ ಸಮಿತಿ, ಜಿಲ್ಲಾಡಳಿತ, ನಗರ ಸಭಾ ಆಡಳಿತದ ಪದಾಧಿಕಾರಿಗಳ ಸಹಕಾರವನ್ನು ಸ್ಮರಿಸಿಕೊಳ್ಳುತ್ತೇವೆ. ಅದರಲ್ಲೂ ಮುಖ್ಯವಾಗಿ ಕವಿಗೋಷ್ಠಿ ಸಮಿತಿಯ ಸರ್ವ ಸದಸ್ಯರು ಸಹಕಾರ ನೀಡಿದ್ದು ಎಲ್ಲರಿಗೂ ಕೃತಜ್ಞತೆಗಳು. "ಕಾವ್ಯಧಾರೆ"ಯನ್ನು ಮುನ್ನುಡಿಯೊಂದಿಗೆ ಅರ್ಥಪೂರ್ಣವಾಗಿಸಿದ ಶ್ರೀ ಸುಬ್ರಾಯ ಸಂಪಾಜೆ, ಕವನ ಆಯ್ಕೆಯೊಂದಿಗೆ ವಿವಿಧ ರೀತಿಯಲ್ಲಿ ಸಹಕರಿಸಿರುವ ಎಚ್. ಆರ್.ಎನ್. ಮೂರ್ತಿ, ಕುಡೆಕಲ್ ಸಂತೋಷ್, ಬಿ. ಸಿ. ದಿನೇಶ್, ಎಂ. ಇ. ಮಹಮದ್,

ಎಸ್. ಜಿ. ಉಮೇಶ್, ರೇವತಿ ರಮೇಶ್, ಉಜ್ವಲ್ ರಂಜಿತ್, ಮಾದೇಟಿರ ಬೆಳ್ಯಪ್ಪ, ಜಿ. ವಿ. ರವಿಕುಮಾರ್, ಶ್ರೀಧರ್ ಹೂವಳ್ಳಿ ಹಾಗೂ ಸ್ನೇಹಿತರಿಗೆ ಧನ್ಯವಾದಗಳು. ಆಕರ್ಷಕ ಮುಖ ಪುಟ ವಿನ್ಯಾಸ ಮಾಡಿರುವ ಕಲಾವಿದ ಬಿ. ಆರ್. ಸತೀಶ್, ಅಕ್ಷರ ವಿನ್ಯಾಸ ಮಾಡಿದ "ಶಕ್ತಿ" ಮುದ್ರಣಾಲಯ ಹಾಗೂ ಸಹಕರಿಸಿದ ಸಿಬ್ಬಂದಿಗಳಿಗೆ ಆಭಾರಿ.

ಆಹ್ವಾನಿತ ಕವಿಗಳಾಗಿ ಪಾಲ್ಗೊಂಡ ಸ್ಮಿತಾ ಅಮೃತರಾಜ್, ಅಮ್ಮಣಿಚಂಡ ಪ್ರವೀಣ್ ಚಂಗಪ್ಪ, ಕುದುಕುಳಿ ಮಿಲನ ಭರತ್ ಹಾಗೂ ಕಾವ್ಯಧಾರೆಯ ಪ್ರಕಟಣೆಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಪ್ರಾಯೋಜಕತ್ವ ನೀಡಿದ್ದು ಅಕಾಡೆಮಿ ಅಧ್ಯಕ್ಷ ಶ್ರೀ ಬಿದ್ದಾಟಂಡ ಎಸ್. ತಮ್ಮಯ್ಯ ಹಾಗೂ ಸರ್ವ ಸದಸ್ಯರಿಗೂ ಧನ್ಯವಾದಗಳು. ಕಾವ್ಯಧಾರೆಯಲ್ಲಿ ಅವಕಾಶ ಪಡೆದ ಕವಿಗಳಿಗೆ ಅಭಿನಂದನೆಗಳು.

ಕಾಯಪಂಡ ಶಶಿ ಸೋಮಯ್ಯ

ಅಧ್ಯಕ್ಷರು, ಬಹು ಭಾಷಾ ಕವಿಗೋಷ್ಠಿ ಸಮಿತಿ

ಮಡಿಕೇರಿ ಜನೋತ್ಸವ ದಸರಾ ಸಮಿತಿ - 2014



# ಪರಿವಿಡಿ

## ಆಹ್ವಾನಿತ ಕವನ


| | | |
|---|---|---|
| 1 | ಆತ್ಮ ಸಖಿ ನೆನಪಾಗಲೇ ಇಲ್ಲವೇ | 1 |
| 2 | ತಾಮನೆ ಕೊಡಗ್ | 3 |
| 3 | ಬಹಿಷ್ಕಾರ | 4 |


## ಕನ್ನಡ ಕವನ


| | | |
|---|---|---|
| 4 | ಭಾರದ ಜೀವವಾಗಿ | 5 |
| 5 | ಹುಡುಕಿ ಕೊಡುವಿರಾ | 6 |
| 6 | ಮರ | 7 |
| 7 | ಹುಡುಕಾಟದಲ್ಲಿ ನಾ... | 8 |
| 8 | ಅಪ್ಪ - ಅಮ್ಮ | 10 |
| 9 | ಬಾವಿಯೊಳಗಿನ ಕಪ್ಪೆ | 11 |
| 10 | ಮುಕ್ತಿ ಮಾರ್ಗ | 12 |
| 11 | ದನಿಯಾಗುವ ಇನ್ನು | 13 |
| 12 | ಬಾಳ ತೀರ ಯಾನ | 14 |
| 13 | ಪಿತೃವಿಗೆ ನುಡಿಮಾಲೆ | 16 |
| 14 | ಕವನ ಹುಟ್ಟುತ್ತದೆ | 17 |
| 15 | ಗುಟ್ಟು - ನುಡಿಗಟ್ಟು | 18 |
| 16 | ನಾ ಕಟೆದ ಭಗವಂತ | 19 |
| 17 | ಗುಲ್ ಮೊಹರ್ | 20 |
| 18 | ಬದುಕಿನ ತಿರುಗುತೊಟ್ಟಿಲು | 21 |


## ಕೊಡವ ಕವನ


| | | |
|---|---|---|
| 19 | ತಳ್ಳುವೊ ಬೋಂಡ ವಯಸ್ಸಂಗಳ | 22 |
| 20 | ಮೌನತ್'ರ ತರ್ಕ್ | 23 |
| 21 | ಮಳೆ ತುಳಿ | 24 |
| 22 | ಮಣ್ಣ್'ನ ಮರ್'ಕತಿ | 25 |
| 23 | ವರ ಕವಿ ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ | 26 |


## ಅರೆಭಾಷೆ ಕವನ


| | | |
|---|---|---|
| 24 | ಕಲಿಗಾಲ | 27 |
| 25 | ಒಡಹುಟ್ಟಿದವು | 28 |
| 26 | ಹೊತಾರೆನ ಗಳಿಗೆ | 29 |
| 27 | ಬಾಲ್ಯ ವಿವಾಹ | 30 |
| 28 | ಬಾಳ್-ಬದ್ಕ್ | 31 |

# ಪರಿವಿಡಿ


ತುಳು ಭಾಷೆ

29 ದೀಟಿಗೆ 32
30 ಸಾದಿ ಮೊಲುಂಡು 33

ಜೇನು ಕುರುಬ ಭಾಷೆ

31 ಅಣ್ಣಾಗಿ ಹುಟ್ಟಿರುದೇ ತಪ್ಪಾ ? 34

ಹವ್ಯಕ ಭಾಷೆ

32 ಎನಗೊಂದು ಅನುಮಾನ 35

ಕುಂಬಾರ ಭಾಷೆ

33 ರೈತ ಕುಂಬಾರ 36

ಬ್ಯಾರಿ ಭಾಷೆ

34 ಮನಸ್ಸ್‌ರೊ ಗೆಂದ 37

English Poems

35 Save us 38

ಮರಾಠಿ ಭಾಷೆ.

36 ವಾಯಟ ಲೋಕಾಚ ನಜರ 39

ಮಕ್ಕಳ ಕವನ

37 ನಮ್ಮೂರ ದಸರಾ 40
38 ನನ್ನ ಕವನ 41
39 ಹಣತೆ 42
40 ಎಳೆಯ ಮನಸುಗಳು 43

ಮಲಯಾಳಂ ಭಾಷೆ

41 ಎನ್ಡೆ ಅಗತ್ತೇಕ್ಕ್ ಕಯರುಂಬೋಳ್ 44

ತೆಲುಗು ಭಾಷೆ

42 ನೇನು ಚೆಪ್ಪು ಕೋವಡನಿಕಿ 45

ಕೊಂಕಣಿ ಭಾಷೆ

43 ಮೊಗಾಳ್ ಪಾವ್ಲಾ... 47

हिन्दि कवन

44 वीरेश का वह दिन 48


♥♥♥♥

ಅಹ್ಲಾನಿತ ಕಪಸ

# ಆತ್ಮ ಸಖಿ ನೆನಪಾಗಲೇ ಇಲ್ಲವೇ..



ಹುಲ್ಲ ಹಾಸಿನ ಮೇಲೆ
ತಲೆ ಕೆಳಗು ಬಿದ್ದ ಪಾರಿಜಾತವ
ಆಯುವಾಗಲೆಲ್ಲಾ ಕೃಷ್ಣ ಬಿಡದೇ
ಕಾಡುತ್ತಾನೆ.
ಒಂದೊಂದೇ ಆಯ್ದು ಉಡಿ
ತುಂಬಿಕೊಳ್ಳುವಷ್ಟು ಹೊತ್ತು
ಮೌನ–ಸಂವಾದ.

ಜನುಮ ಜನುಮಾಂತರದ ಬಂಧುವಿನಂತೆ
ಆತ್ಮ ಸಖಿನಂತೆ ಕುಶಲ ವಿಚಾರಿಸಿ
ನನ್ನ ತುದಿ ಮೊದಲಿಲ್ಲದ ಪ್ರಶ್ನೆಗಳಿಗೆ ಮಾತ್ರ
ಬರಿದೇ ಮುಗುಳು ನಗುವಿತ್ತು ನಡೆದು ಬಿಡುತ್ತಾನೆ.

ನಾನೋ ಒಂದು ಕಿರುನಗೆಗೆ
ಅಪಾರ ಅರ್ಥ ಹೊದೆಸಿಕೊಂಡು
ಮತ್ತಷ್ಟು ಬಿಡದೇ ತೋಡಿಕೊಳ್ಳುತ್ತಿದ್ದೇನೆ.

ನಿಜ ಹೇಳು ಕೃಷ್ಣಾ..
ಪಟ್ಟದರಸಿಗೆ ದೇವಲೋಕದಿಂದ
ಪಾರಿಜಾತ ಗಿಡ ಅರಸಿ ತರುವಾಗ
ನಿನಗೆ ಒಮ್ಮೆಯೂ ಯಮುನಾ ತಟದ
ಆತ್ಮ ಸಖಿ ನೆನಪಾಗಲೇ ಇಲ್ಲವೇ..?

ನನ್ನ ಉತ್ಕಟ ಪ್ರಶ್ನೆಗೆ
ಹಾಯಿಸಿದ ಖಾಲಿ ಮುಗುಳು ನಗೆಯೊಳಗೆ
ಈಗ ಭಾವಾರ್ಥದ ಅಲೆಗಳು ಕಂಪಿಸುವುದಿಲ್ಲ.

ಕೆಂಪು ತೊಟ್ಟು ಆಕಾಶ ನೆಟ್ಟು
ಬಿಳಿ ಪಕಳೆ ಪಾರಿಜಾತ
ರುಕ್ಮಿಣಿ ಸತ್ಯಭಾಮೆಯರ ಅಂಗಳದ
ಪ್ರತಿ ಸಂಜೆಗಳಲ್ಲಿ ನಿಟ್ಟುಸಿರ ಬಿಕ್ಕುತ್ತಾ
ನೆಲಕ್ಕಪ್ಪುವಾಗ..

ಅದೆಷ್ಟೋ ಪ್ರೀತಿಯ ಕೊಡ ಹೊತ್ತ
ರಾಧೆಯಂದಿರು ಕಣ್ಣಲ್ಲಿ ಕಣ್ಣಿಟ್ಟು
ಪಾರಿಜಾತ ಸಸಿ ನೆಟ್ಟು ಹೂ ಹೆಕ್ಕುತ್ತಾ
ಹನಿಗಣ್ಣಾಗುತ್ತಿದ್ದಾರೆ.
ಗಂಧದೊಂದಿಗೆ ಬಂಧ ಬೆಸೆಯುತ್ತಾ
ನೆನಪುಗಳ ಹೀರಿ ಹಿಡಿದಿಟ್ಟುಕೊಳ್ಳುತ್ತಿದ್ದಾರೆ.

ಕೃಷ್ಣಾ..ಇವೆಲ್ಲಾ ನಿನಗೆ ಗೊತ್ತಿದೆಯಾ..?
ಕೇಳ ಬೇಕೆಂದಿದ್ದೆ.
ಹೇಗೂ ಪಾರಿಜಾತ ಆಯುವಾಗ
ನಾಳೆ ಬಂದೇ ಬರುವನಲ್ಲ
ಆಗ ಕೇಳಿಯೇ ತೀರಬೇಕು.

✍ ಸ್ಮಿತಾ ಅಮೃತರಾಜ್, ಸಂಪಾಜೆ



# "ತಾಮನೆ ಕೊಡಗ್"



ಈ ನಾಡ್ ಕಾಫಿ ಪುಳಿ ಯಾಲತ್‌ರ ಚೊದಾನ ಮಳೆನಾಡ್
ತರತರ ಪಣ್ಣ್‌ರ ಪೂನ್ನ್‌ರ ಸಿರಿನಾಡ್
ಚಾಂದ್ ಬೂಟಿ ಬೋಳ್ಳಂದಿ ಚಕ್ಕೆ ಮಾಂಗೆ ದೇವದಾರ್|
ಆ ಪಾಟಿ ಮರ ಕಡ್ಡಿ ನಟ್ಟವು ದಾರ್?

ಮಳೆ ಬೊಳೆಲ್ ಮನುಷ್ಯಂಗ್ ಉಂಬಕ್ ಕೂಳ್|
ಕಯಿಪು ಮೊವುಪ್ ಕೂಡ್‌ನ ದಂಡ್ ದಿನತ ಬಾಳ್|
ತಂಪ್ ತಂಗಾಳಿರೆಡೆಲ್ ಕಾಕೆ ಪರಂಡಿಯಾಡ ಕೂತ್|
ಕುಂದ್ ಇಳ್‌ಂಜಿ ಓಡುವ ಕೇಮ ಕಾಟಿ ಅಬ್ಬಿರ ಪಾಟ್|

ತೋಕ್ ಪೀಚೆ ಒಡಿಕತ್ತಿ ಕುಪ್ಯಚೇಲೆ ಮಂಡೆ ತುಣಿ|
ಅಂಬ್ ಮೀಸೆ ಕೊಡವ ಬಂಬಂಗದ್ ಬೀರ್ಯ|
ಕರ್ತಮಣಿ ಕಾಮೊಯಿರ ಜೋಮಾಲೆ ಪವಳ ಸರ|
ಕೊಡವತಿ ಪೊಂಗಕದ್ 'ಪತ್ತ್‌ಹೆಕ್ಕ್‌ರ'ಭಾಗ್ಯ|

ದೇಶಕೋರ್ ಮಾದೇವಿಯು, ನಾಡ್‌ಕೋರ್ ಮಾದೇವನು|
ಒಕ್ಕಕೋರ್ ಕಾರಣನೂ ಓಣಿಕೋರ್ ನಾಥನೂ|
ಒಂದಾಯಿ ಕಾಪ ನಾಡಿದ್, ಜಭೂಮಿರ ಮಣ್ಣದ್|
ವಿಶ್ವ ಶಾಂತಿ ಮೆರಂದ ಪಡೆಯಾಳಿಯಡ ತೊಟ್ಟಿದ್|

ಸಾಹಿತ್ಯ ಸಂಸ್ಕೃತಿಯು ಎಡೆಮೇಂಗ್‌ನ ದಿಲ್ಲಿ|
ಪದ್‌ನೆಟ್ಟ್ ಜನಾಂಗಂವು ಒಂದಾಯಿ ಬಾವದಿಲ್ಲಿ|
ನುಪ್ಪತಂಜಿ ನಾಡ್‌ರ ತಂಪಾನ ಐನ್‌ಮನೆ|
ಭಾರತಿಯೇ ಜೂಕಿ ಎಡ್‌ತ ಕೊಡಗೆಣ್ಣುವ ತಾಮನೆ|

✍ ಅಮ್ಮಣಿಚಂಡ ಪ್ರವೀಣ್ ಚಂಗಪ್ಪ, ಕೊಟ್ಟೋಳಿ

# ಬಹಿಷ್ಕಾರ



ಕಾಮನೆಗ ಕೋಣೆವ ನಿಮ್ಮ
ದರ್ವೇಶಿ ಕಣ್ಣ್‌ಗ ನಮ್ಮನ
ಕೆಕ್ಕರ್ಸಿ ನೋಡಿದೇಂತೇಳಿರೆ ನಾವ್
ನಿಮ್ಮನ ಬಹಿಷ್ಕರಿಸಿವೆ
ಗ್ಯಾನ ಇರ್‍ಲಿ...

ನಮ್ಮ ನೋವ್‌ನ ಇನ್ನ್ ಮೌನಲೇ
ಮಣ್ಣ್ ಮಾಡುದ್ಲೆ
ಕಣ್ಣೀರಿಗೆಸಾ ನಾವ್ ಮಾತು ಕಲ್ಸಿವೆ
"ಮಾತೆ"ಯಾಗಿರ್‍ವ ನಮ್ಮನ
ಮಾಯೇಂತ ದೂರ್‍ವ, ನಿಮ್ಮ ದೂರಿಗೆ
ನಾವ್ ಸೊಪ್ಪು ಹಾಕುದ್ಲೆ ದಂಗೆ ಎದ್ದವೆ!

ನಿಮ್ಮ ಮನ್ಸಿಗೆ ಇಲ್ಲದ ಶೀಲ
ನಮ್ಮ ಬಟ್ಟೆಗೆ ಯಾಕೆ ?
ನಮ್ಮ ಹತಾಶೆನ, ದುಃಖದ ಕೂಗ್‌ಲಿ
ನೀವ್‌ಗೆ ನಿಮ್ಮ ಅವ್ವಂದಿರ ಕೂಗು
ಕೇಳ್ವಲೇಂತಾದರೆ
ಅವ್ವನ ಪಟ್ಟನೇ ನಾವ್ ಬುಟ್ಟು ಕೊಟ್ಟವೆ

ಬ್ಯಾಡ ನಾವ್‌ಗೆ
ಬದ್ಕಿಕೆ ಬುಡದ ನಿಮ್ಮ
ಸವಕಲ್ ಮರ್‍ಯಾದಿ
ನಮ್ಮ ಜೀವದ ಮುಂದೆ ನಿಮ್ಮ ಚೆಲ್ಲಾಟ
ನಿಲ್ಸಿಕೆ
ಮ್ಯಾಲೆ ಇರ್‍ವವನ ಪಾಪದ ಬಿಂದಿಗೆನ
ಹಂಗೇ ತುಂಬಿಸಿ ಬುಟ್ಟವೆ ನಿಮ್ಮನ
ಸುಟ್ಟು ಹಾಕ್ವ ಪಾಪ ಪ್ರಜ್ಞೆಸಾ
ನಾವ್‌ಗೆ ಬರದಂಗೆ!

✍ ಮಿಲನ ಕೆ ಭರತ್, ಭಾಗಮಂಡಲ.

ಕನ್ನಡ ಕವನ

# ಭಾರದ ಜೀವವಾಗಿ



ಹುಟ್ಟಿಸಿದ ನನ್ನನ್ನು
ಭಾರದ ಜೀವವಾಗಿ, ಯಾರಿಗೂ ಬೇಡವಾಗಿ
ಇಲ್ಲಿ ನಾನೊಬ್ಬಳು ಹೆಣ್ಣು
ಇಲ್ಲಿ ಎಲ್ಲರನೋಟ
ಕೆನೆ ಮೊಸರಲ್ಲಿ ಕಲ್ಲು ಹರಳು ಹುಡುಕುವಂತೆ !

ಬರದ ಭೂ ಒಡಲಲ್ಲಿ
ಕಣ್ಣೀರ ಮಳೆ
ಹಸಿ ತೆನೆ ಚಿಗುರೊ ಹುರುಳಿಲ್ಲ ಬತ್ತಿದ ಕಂಗಳಲ್ಲಿ
ಇದು ಸರಿಹೋಗಬಹುದೆಂಬ ನಂಬಿಕೆಯೂ
ನಾಳೆಯ ದಿನಗಳಲಿಲ್ಲ !

ಕ್ಷಣ-ಕ್ಷಣಗಳನ್ನು ಪೋಣಿಸಿ, ಉಸಿರಾಡುತ್ತಿರುವೆ
ಮುಂದಿನ ಘಳಿಗೆಯಲಿ ನಿಲ್ಲಬಹುದೇನೋ ?
ಉಸಿರು ! ಎಂಬ ಕಾತರದಲಿ

ಹಿಂಸೆ ಎನಿಸುವ ದಿನಗಳು
ಕೊಲ್ಲುತ್ತಿವೆ ನಾಳೆಗಳನ್ನು
ವಿಶ್ವಾಸವಿಡಬೇಡ ಮುಂದಿನ ಜನುಮದಲ್ಲೆಂಬಂತೆ !

ಬೆಳಗಾದೊಡನೆ ಮನದಲ್ಲಿ ಹುಟ್ಟಿಕೊಳ್ಳುವ ಭಯವನ್ನೋಡಿಸಿದರೂ
ಹಾದಿಯಲ್ಲಿ ಪದರಿಸುವ ಕಲ್ಲುಗಳಿಗೇನೂ ಬರವಿಲ್ಲ !

ನಾ ಕಾಯುವ ದಿನ ಬಂದಾಗ
ಭಾರದ್ದ ಜೀವನ ಇಳಿಸಿದ ಖುಷಿಯಿದೆ ನನ್ನೊಳಗೆ
ಬೆನ್ನಮೇಲಿನ ಬೇತಾಳವನ್ನಿಳಿಸಿದಂತೆ !

✍ ಕಾವ್ಯ ಎ.ಎಸ್, ಭಾಗಮಂಡಲ

# ಹುಡುಕಿ ಕೊಡುವಿರಾ...?

ಎರವಲು ತಂದು
ಬರೆಯಲೆಂದು ಕವಿತೆ
ಇರಿಸಿದ್ದೆ ಒಂದಷ್ಟು
ಉದ್ದ ಗಿಡ್ಡನೆಯ ಸಾಲುಗಳ
ಭಾವ ಭಂಡಾರದಲಿ
ಜಂಜಾಟದ ಕತ್ತಲೆಯೊಳು
ಕಳೆದು ಹೋಗಿವೆ
ಹುಡುಕಿ ಕೊಡುವಿರಾ...?

ದಲಿತರ ದನಿಯಾಗಿ
ಶೋಷಿತರ ಬೆಳಕಾಗಿ
ಬಡವರ ಬಲವಾಗಿ
ಅನ್ಯಾಯಕ್ಕೆ ನ್ಯಾಯವಾಗಲು
ನಲಿಯುತ್ತಾ ನಿಂತಿದ್ದ
ನನ್ನ ಕ್ರಾಂತಿಕಾರಿ ಕವಿತೆಯ ಸಾಲುಗಳು
ಕಳೆದು ಹೋಗಿವೆ ಹುಡುಕಿ ಕೊಡುವಿರಾ?

ನುಡಿದಂತೆ ನಡೆಯದ
ನಡೆಯಂತೆ ನುಡಿಯದ
ಆಡಿ ಮಾಡದವರ
ಇಬ್ಬಂದಿತನಕ್ಕೆ ಧಿಕ್ಕಾರ ಹಾಡಲು
ಸಜ್ಜಾಗಿದ್ದ ಸಾತ್ವಿಕ ಬಂಡಾಯ
ಸಾಲುಗಳು ಕಳೆದು ಹೋಗಿವೆ
ಹುಡುಕಿ ಕೊಡುವಿರಾ...?

✍ ಶ್ರೀಮತಿ ಸ್ನೇಹಾಬಸಮ್ಮ, ಸೋಮವಾರಪೇಟೆ

# ಮರ



ಏನೆಂದು ಹೇಳಲಿ...?ಏನೆಂದು ಹೇಳಲಿ...?
ಅಂದು, ರಸ್ತೆ ಬದಿಯಲ್ಲಿ ನಿಂತು
ಮರದ ಅಮ್ಮ ಕೈ ಬೀಸಿ ಕರೆಯುತ್ತಿದ್ದಳು.
ಹಸಿದವರಿಗೆ ಹಣ್ಣು ಉಣ ಬಡಿಸುತ್ತಿದ್ದಳು.
ದಣಿದವರಿಗೆ ನೆರಳಾಸುತ್ತಿದ್ದಳು.
ಹಕ್ಕಿಗಳಿಂದ, ಗೀಗೀಪದ ಲಾಲಿಗೀತೆ ಹಾಡಿಸುತ್ತಿದ್ದಳು.
ಏನೆಂದು ಹೇಳಲಿ...? ಏನೆಂದು ಹೇಳಲಿ...?

ಇಂದು ಕಾಣೆಯಾಗಿದ್ದಾಳೆ, ಈಕೆ ಸ್ಥಳದಿಂದ
ಚದುರಿ ಬಿದ್ದಿವೆ ಹಣ್ಣುಗಳು ಈ ಪರಿ ಹಲಸಿದೆ ಅಡುಗೆ
ಹರಡಿದೆ ಇಲ್ಲಿ, ರೆಕ್ಕೆ-ಪುಕ್ಕಗಳು ಮುರಿದ ಕೊಕ್ಕುಗಳು,
ಕಳಚಿದೆ ಮರದ ನಂಟುಗಳು ಇನ್ನುಳಿದಿರುವದು ಇವಳ
ಇತಿಹಾಸ ಮಾತ್ರ. ಅದು ಕೂಡ ಮುಚ್ಚಿ ಹೋಗಲಿದೆ
ಅಣತಿಯಲ್ಲೇ, ಹೆದ್ದಾರಿಯ ಗೋರಿಯ ಒಳಗೆ
ಇನ್ನೇನು ಹೇಳಲಿ...? ಇನ್ನೇನು ಹೇಳಲಿ?

ದಶಕಗಳ ಮಳೆಗಾಳಿ ಎದುರಿಸಿದ್ದವಳು
ನಿಮಿಷಗಳ ಯಂತ್ರಗಳ ಆರ್ಭಟಕೆ ತತ್ತರಿಸಿರುವಳು
ಸ್ವಾರ್ಥದ ಪರವಾನಗಿ ಪಡೆದ ಕೈಗಳು ಕಿತ್ತು ಎಸೆದಿವೆ,
ಅವಳ ಹಸಿರು ಉಡುಗೆಯನು, ಅಭಿವೃದ್ಧಿ ಸೋಗಿನಲಿ
ಅಳಿಸಿದ್ದಾರಲ್ಲಾ, ಮರದ ಹಣೆಬರಹ.
ಇನ್ನೇನು ಹೇಳಲಿ...? ಇನ್ನೇನು ಹೇಳಲಿ...?

ಹುಡುಕಬೇಕಿದೆ ಅಷ್ಟೆ! ಮತ್ತೆ ಅವಳ ಅಸ್ತಿತ್ವವನ್ನು
ಯಾರದ್ದೋ ಮನೆಯ ಟೇಬಲ್ಲಿನಲ್ಲಿ, ಖುರ್ಚಿಗಳಲ್ಲಿ
ಕಟ್ಟಿಗೆಯಲ್ಲಿ, ಪೆಟ್ಟಿಗೆಯಲ್ಲಿ, ದೌಲತ್ತಿನ ಅರಮನೆಗಳಲ್ಲಿ,
'ಮಿಲ್'ಎಂಬ ಮರದ ಕಸಾಯಿ ಕಾರ್ಖಾನೆಯಲ್ಲಿ
ಇನ್ನೆಷ್ಟು ಹೇಳಲಿ...? ಇನ್ನೆಷ್ಟು ಹೇಳಲಿ...?

ಮರ ಕಡಿಯಬೇಡವೋ, ಮಾನವ
ಅದುವೇ ಕಾಯುವದು, ನಿನ್ನ ಪ್ರಾಣವ
ನೀ ಕಡಿದರೆ ಮರ, ನಿನ ಪೀಳಿಗೆ ಎದುರಿಸಲೇಬೇಕು
ಬರ, ಬರ ಇನ್ನಾದರು ನೆಡು ಗಿಡಗಳ ಅಕ್ಕ-ಪಕ್ಕ
ಹಾಗೆಯೇ, ನೆನಪಿರಲಿ ಸಾಲು ಮರದ ತಿಮ್ಮಕ್ಕ ಸಾಲು ಮರದ ತಿಮ್ಮಕ್ಕ

✍ ಎಸ್. ಮಹೇಶ್, ಕೂಡ್ಲೂರು ಚಿಟ್ಟಳ್ಳಿ.

## ಹುಡುಕಾಟದಲ್ಲಿ ನಾ.....

ನಾ ಬಯಸಿ ಹೊರಟಿದ್ದೆ
ಕಾಂಕ್ರಿಟ್ ಕಟ್ಟಡಗಳಡಿಯಲ್ಲಿ
ನನ್ನೂರ ತಂಪಾದ ಸವಿಗಾಳಿಯನ್ನ

ನಾ ಹಣ ಕೊಟ್ಟು ಹುಡುಕಿದ್ದೆ
ನಗರದ ನಗುವಿನಬ್ಬರದಲಿ
ನನ್ನೂರ ಸಹಜ ಸ್ನಿಗ್ಧ ನಗುವನ್ನ

ನಾ ಹುಡುಕಿದ್ದೆ ಧಗೆ ಸುರಿವ ಕಟ್ಟಡಗಳ
ಸುಡುಸುಡುವ ನೆರಳಿನಲಿ
ನನ್ನೂರ ಮರಗಿಡಗಳ ತಂಪನ್ನ

ನಾ ಬೆರಗಾಗಿ ದಿಟ್ಟಿಸಿದ್ದೆ
ಬೆಡಗಿಯರ ರಂಗಿನ ಹಿಂದೆ
ನನ್ನೂರ ಹುಡುಗಿಯರ ಮುಗ್ಧಮೊಗವನ್ನ


ನಾ ತುಂಬಿ ದೂರಿನ ಗದ್ದಲದಲಿ
ವಾಹನಗಳಬ್ಬರದ ಭರಾಟೆಯಲಿ
ನನ್ನೂರ ಪಕ್ಷಿಗಳ ಕಲರವವ ಕಾಣಬಯಸಿದ್ದೆ

ಝಣಗುಡುವ ನಾಣ್ಯನೋಟುಗಳ
ಕಂತೆಗಳ ನಡುವೆ
ನನ್ನೂರ ಪ್ರೀತಿ ವಾತ್ಸಲ್ಯಗಳ ಅರಸಿದ್ದೆ

ನಾಗರಿಕತೆಯ ಹೆಸರಿನಡಿ
ಸ್ವಾರ್ಥಭಾವನೆಗಳ ಬೇರ ಹಿಂದೆ
ನನ್ನೂರ ನಿಸ್ವಾರ್ಥತೆಯ ಕೆದಕಿ ಹುಡುಕಿದ್ದೆ

ಅತೃಪ್ತಿ, ಅಶಾಂತಿ, ಅಸಮಧಾನಗಳ ನಡುವೆ
ತಡಕುತ್ತಲೇ ಇರುವೆ
ನನ್ನೂರ ಜನರಲ್ಲಿನ ತೃಪ್ತಿ, ಶಾಂತಿ, ಸಮಾಧಾನಗಳನ್ನ
ಎಂದಾದರೊಮ್ಮೆ ಸಿಗಬಹುದು ಎಂದು

✍ ಡಿ. ಸುಜಲಾದೇವಿ, ಸೋಮವಾರಪೇಟೆ



# ಅಪ್ಪ-ಅಮ್ಮ

ಮಗುವ ಕಂಡರೆ ಮುತ್ತಿಡುವರು
ಅಂಬೆಗಾಲಿಡಲು ನಕ್ಕು ನಲಿಯುವರು
ತುಟಿಯಂಚಿನಿಂದ ಶಬ್ಧವದು ಉದುರಲು
ಆಕಾಶವೇ ಅಂಗೈಗೆ ಬಂದಂತೆ ಭಾವುಕರಾಗುವರು

ಬೆಳೆಬೆಳೆಯುತ್ತಾ ಒಳಿತ ಕೆಡುಕ ತಿಳಿಸಲಿಚ್ಚಿಸುವರು
ಆದರೆ ಅದರಲ್ಲಿ ಧನಾತ್ಮಕ, ಋಣಾತ್ಮಕ ಎರಡೂ ತುಂಬುವರು
ಮನಸ್ಸದು ವಾಲುವದು ಸಿಹಿನೋಟಗಳತ್ತ
ಆದರೆ ಸಿಹಿಯದೋ, ಕ್ಷಣಿಕವಾದ ನೀರಗುಳ್ಳೆ ನೀರಲಿ ತೇಲುತಾ

ಬೇಕೆಂಬುದು ಬೇಕೇ ಬೇಕು ಎಂದೂ
ಸಿಗಲಿಲ್ಲವಾದರೆ ನನಗಾವುದೂ ಸಿಗಲಿಲ್ಲವೆಂಬ ಚಿಂತೆ
ಪ್ರಪಂಚನೇ ನಾ ಇಚ್ಚಿಸಿದಂತೆ ಇರಬೇಕೆಂದು ಬಯಸಿದರೆ ಇವರು
ಮಮತೆಯಿಂದ ಅದಕ್ಕೂ ನೀರ ಹಾಕುವರು ಒಳಿತಾಗಲೆಂದು

ಕೋಪದಲ್ಲೂ ನನ ಕೂಸು ಅದೆಷ್ಟು ಮುದ್ದಾಗಿ ಕಾಣುವುದು
ಒಂದು ಹನಿ ಕಣ್ಣೀರು ಬಾರದಿರಲಿ ನನ್ನೆದುರಲೆಂದು
ಎಲ್ಲವನು ಕ್ಷಮಿಸಿಬಿಡುವರು ಚಡಪಡಿಸುತ
ಕೊನೆಗೊಂದು ದಿನ ಹಾದಿತಪ್ಪಿತೆ ಎನ್ನ ಕೂಸು ಎಂದು ಪರಿತಪಿಸುವರು


ಹೊರ ಪ್ರಪಂಚದೆದುರು ಹೇಳಲಾಗದೆ ಕಣ್ಣೀರಿಡುವರು
ಆದರೂ ಚಿನ್ನದಂತಹ ಮನಸು ಎನ್ನ ಮಗುವದೆನುವರು
ಸದಾ ಕಾಲ ಎನ್ನ ಕಂದ ನಗುತಲೇ ಇರಲೆಂದು ಹರಸುವರು
ಬಾನಂಚಿನ ರವಿಯ ಕಂಡು ಕಣ್ಣಲ್ಲೇ ನೀರೂರಿಸುವರು

✍ ಸುನಿತಾ ಎಚ್.ಟಿ, ಕಕ್ಕಬೆ

# ಬಾವಿಯೊಳಗಿನ ಕಪ್ಪೆ

ನಾನು ಬಾವಿಯೊಳಗೆ
ಒಂದು ಮೂಲೆಯಲ್ಲಿ
ನನ್ನಷ್ಟಕ್ಕೆ ಇದ್ದ ಕಪ್ಪೆ
ಎಲ್ಲಿಂದಲೋ ನೀನು ಬಂದೆ
ಬಾವಿಯಿಂದ ಮೇಲೆತ್ತಿದೆ .
ಕುಣಿಯಲು ಕುಪ್ಪಳಿಸಲು ಕಲಿಸಿದೆ

ನನ್ನ ಕೈಹಿಡಿದು
ಸಾಗರಕೆ ಕರೆತಂದೆ
ನಿನ್ನ ಜತೆ ಆಡಿದೆ, ನಲಿದೆ
ಜಗವನ್ನೇ ಮರೆತೆ
ಅದೊಂದು ದಿನ
ವಿಶಾಲ ಸಾಗರದ
ನಡು ನೀರಿನಲಿ
ಕೈಬಿಟ್ಟು ಮಾಯವಾದೆ



ಈಗ ಒಂಟಿ ನಾನು
ಏನು ಮಾಡಲಿ ?
ಎತ್ತ ಹೋಗಲಿ?
ಸುತ್ತಮುತ್ತ ನುಂಗಲು
ಹೊಂಚು ಹಾಕುವ
ಹಾವು, ತಿಮಿಂಗಿಲ
ಕ್ಷಣಕ್ಷಣವೂ ಭಯದ ವಾತಾವರಣ

ಆ ಬಾವಿಯ ಬದುಕಲ್ಲೇ
ಸುಖವಿತ್ತು
ಹೌದು, ನಾನು
ಸಾಗರಕೆ ಬರಬಾರದಿತ್ತು

✍ ಸಹನಾ ಕಾಂತಬೈಲು, ಮಡಿಕೇರಿ

# ಮುಕ್ತಿ ಮಾರ್ಗ

ಮತ್ತೇರಿ ಸೊಕ್ಕದಿರು ಮತ್ಸರದಿ ಹೆಣಗದಿರು
ಪತಿತ ಭಾವವ ಬಿಟ್ಟು ಭಾವೈಕ್ಯ ಸಾರು
ಜಾತಿ ಧರ್ಮದ ಕಟ್ಟಳೆಯ ದೂರವಿಡು
ನೀತಿ ನಿಷ್ಠೆಯ ಕರ್ಮವನು ಮಾಡು

ಕಷ್ಟ ಸುಖಗಳು ಬರಲು ಕುಗ್ಗದಿರು ಹಿಗ್ಗದಿರು
ಅಶಾಂತಿ ಅಭದ್ರತೆಯನೆಂತು ಮನಕೆ ತರದಿರು
ಆಸೆಗಳು ಹಲವಾರು ಆಮಿಷಗಳು ಜೋರು
ತ್ಯಾಜ್ಯವೆಲ್ಲವ ತೊಡೆದು ಅಮೃತ ರಸವನು ಹೀರು

ಕಾಮ ಕ್ರೋಧವ ಬಿಟ್ಟು ಶಾಂತಿಯ ನೆಲೆಗೊಳಿಸು
ಸ್ನೇಹ ಪ್ರೀತಿಯನಿಟ್ಟು ಹೃದಯವ ತಿಳಿಗೊಳಿಸು
ಅಜ್ಞಾನ ಹಿಂಸೆಗಳು ತರವಲ್ಲ ಮನುಜ
ಸಲ್ಲದು ಸುಳ್ಳಿನ ಸರಮಾಲೆ ನಿಜ

ಕಂಗಳಲಿ ಔದಾರ್ಯ ತನುವಿಗದು ಶೃಂಗಾರ
ಒಲುಮೆ ನಲುಮೆಯೇ ನರ ರುಧಿರ ಸಂಚಾರ
ಪಾಪ ಕೂಪದ ಜ್ವಾಲೆ ಕರುಣೆ ಹನಿಗೆ ತಗ್ಗಿ
ಸರಳ ಹಣತೆಯ ಉರಿಸು ಜೀವನದಿ ಹಿಗ್ಗಿ

ಇರಲಿ ಮನದಲ್ಲಿ ಸೇವಾಮನೋಭಾವ
ತರದಿದು ಮುಂದೆಂದೂ ಬಾಳಿನಲಿ ನೋವ
ಪರರ ಬದುಕಿಗಾಗು ಪಾವಿತ್ರ್ಯ ಬಂಧು
ಸಂತಸದಿ ಜೀವಸದಿ ಮುಕ್ತಿಯನು ಹೊಂದು

✍ ಶೈಲಜ ದಿನೇಶ್, ಭಾಗಮಂಡಲ

# ದನಿಯಾಗುವ ಇನ್ನು




ಮುಸುಕುತಲಿದ ಕತ್ತಲು ಸೂರಿನಡಿ
ಬಿಕ್ಕುತಿಹುದು ಅದೆಷ್ಟೋ ಮುಗ್ಧ ಮನಸು
ವಿಧಿಯಾಟದ ಸೋಗೆನದಿರೆ ಇದನು
ಸಂತೈಸಲು ನೀಡಬೇಕಿದೆ ನಮ್ಮಗಳ ಕರವನು

ನಗು ಮಾಸಿರಲು ಸುಂದರ ಮೊಗದಲಿ
ದುಃಖ ದುಮ್ಮಾನವು ಹುದುಗಿಹುದು ಎದೆಯಲಿ
ಮನದ ತುಂಬೆಲ್ಲಾ ನೋವು ಭಾಷ್ಪೋತ್ತಿರಲು
ಮೌನವಿಹುದು ಮುನಿಸಿಲ್ಲವೆಂಬಂತೆ ಜೊತೆಯಲಿ


ಕಣ್ಣೀರ ಕೋಡಿ ಹರಿದಿದೆಯೆನಲು
ಬತ್ತಿದ ಕಂಗಳೇ ನುಡಿಯುತಲಿದೆ ಸಾಕ್ಷಿ
ಲವಲವಿಕೆಯಿಲ್ಲದ ಆ ನೊಂದ ಮನವನು
ಸರಿಪಡಿಸಬೇಕಾಗಿದೆ ತಿಳಿದವರು ಇನ್ನು

ಚಿಗುರು ಚಿವುಟುವ ಪೈಶಾಚಿಕತೆಗೆ
ಹಾಕಬೇಕಿದೆ ನಾವಿಂದು ಛೀಮಾರಿ
ಕೂಗೋಣ ಕಹಿ ಮನಸುಗಳಿಗೆ ಧಿಕ್ಕಾರ
ದನಿಯಾಗುವ ನಾವು ನೊಂದವರ ಪರ

✍ ಸೌಮ್ಯಶೆಟ್ಟಿ ಬಿ.ಬಿ, ಮಡಿಕೇರಿ



# ಬಾಳ ತೀರಯಾನ




ಭಾವನಾ ಲೋಕದ ಸಾಗರವನು ದಾಟಲೇಬೇಕು
ಬಂದಾಯಿತು ಜಗಕೆ
ಇರುವ ಅಲ್ಪ ಸಮಯದಲೇ ಆಚೆ ದಡವ ಸೇರಬೇಕು
ಬಂದಾಯಿತು ಜಗಕೆ

ಕರುಳ ಬಳ್ಳಿ, ಕಡಿದುಕೊಂಡು, ಅಂಬೆಗಾಲು, ತೊದಲುನುಡಿ
ಮುಂಜಾನೆಯ ಹೊಸ್ತಿಲಲ್ಲಿ ಹೂ ಹೆಜ್ಜೆಯ ಸದ್ದು
ಹಕ್ಕಿಗಳ ಕಲರವ, ನೇಸರನ ಬಿಸಿಮುತ್ತು
ಅತ್ತು ಕರೆದೂ ಸುಸ್ತಾದರೂ
ಬಾಲ ಸಾಗರವ ದಾಟಿತು ಬಾಳ ನೌಕೆ

ಕಂಡದ್ದೆಲ್ಲಾ ರಂಗದಲ್ಲಿ ಕೆಂಪು, ನೀಲಿ, ಹಸಿರು
ನೀರ ಮೇಲೆಲ್ಲಾ ಮುತ್ತಿನ ಲೋಕ
ಹಾಡು ಕವಿತೆ ಹಿಡಿಸದವರು, ಒಗಟುಗಳ ಬಿಡಿಸದವರು
ಗೊತ್ತಿಲ್ಲದೇ ದೂರ ಸರಿದರು

ಬಿಸಿಲು ಭಾರವಾಯ್ತು ನಡು ನೆತ್ತಿಗೆ
ಮಿಯಾಂ ಎಂದರೂ ಘರ್ಜನೆಯೇ ಕೇಳುತಿದೆ
ಗಳಿಸಿದಷ್ಟೂ ಸಾಲದು, ಉಳಿಸಲಂತೂ ಉಳಿಯದು
ನೌಕೆ ದಾಟುತಿದೆ ಸಂಸಾರ ಸಾಗರ

ಬಿಸಿಲು ಇಳಿಯುವಷ್ಟರಲ್ಲಿ
ನಾವಿಕತನ ಸಾಕಾಗಿ, ಶಾಂತತೆಯು ಬೇಕಾಗಿ, ನೆಮ್ಮದಿ ಹುಡುಕಿ
ಕಣ್ಣುಗಳನ್ನೊಮ್ಮೆ ಹೊರಳಿಸಿದೆ ಇಣುಕಿದೆ
ಮಬ್ಬು ಮುಸುಕಿದೆ ಜಗಕೆ

ಕೇಶವೆಲ್ಲಾ ಬೆಳ್ಳಿಯ ಶೃಂಗಾರ ಚರ್ಮದ ಮೇಲೆ ಮೊಮ್ಮಗ ಬಿಡಿಸಿದ
ಅಕ್ಷಾಂಶ, ರೇಖಾಂಶ ಮತ್ತದರ ಮೇಲಷ್ಟು ವಕ್ರಾಂಶ
ಸೂರ್ಯನೂ ಕೆಂಪು ಮುಖ ತೋರಿ ಅಣಕಿಸಿದ
ಮಾತು ಬೆಳ್ಳಿಯಾಚೆಗಿನ ಬಂಗಾರವಾಯ್ತು
ನೌಕೆ ದಾಟಿತು ನಿಸ್ಸಾರ ಸಾಗರ

ಆಚೆ ದಡವು ಅ...ಗೋ ಅಲ್ಲಿ ಬಂದೇ ಬಿಟ್ಟಿತಲ್ಲಾ
ಆಳದಲ್ಲಿದ್ದ ಮುತ್ತು ರತ್ನಗಳ ಮರೆತು ಬಂದೇ ಬಿಟ್ಟಿತಲ್ಲಾ
ಇಳಿ ಸಮಯದಲಿ
ಮೊಣಕಾಲಿಗೆ ಅಭಯ ಹಸ್ತ ನೀಡಿ, ನಡುವಿಗೆ ನಮಸ್ಕಾರ ಮಾಡಿ
ಹೆಜ್ಜೆ ತಪ್ಪದಿದ್ದರೆ ನೌಕೆ ಸೇರಬಹುದು
ಮಹಾ ಸಾಗರದ ಆಚೆ ದಡವನು

✍ ನರಿಯೂರು ಎಲ್ ದಯಾನಂದ,ವೀರಾಜಪೇಟೆ



# ಪಿತೃವಿಗೆ ನುಡಿನಮನ



ಮುಗ್ಧ ಮನಸ್ಸಿನ ಮೆಚ್ಚು ನುಡಿಯ
ಕಷ್ಟಕೆ ಕರಗದ ಸುಖಕೆ ಪಳಗದ
ಮಾತಿಗೆ ಮಣಿಯದ ವಿದ್ಯೆಗೆ ಧಣಿಯದ
ನಿದ್ದೆಯ ಲೆಕ್ಕಿಸದ ಆಹಾರದ ಪರಿವೆಯಿಲ್ಲದ
ಆದರ್ಶ ನಡೆಯ ಇತಿಹಾಸ ನುಡಿವ
ಪಿತೃವಿಗೆ ಹೃನ್ಮನದ ನುಡಿನಮನ

ಬಾಲ್ಯದಲಿ ತೂಗಿಸಿ, ಆಡಿಸಿ
ಚಂದಮಾಮ ತೋರುತ ಹಾಲುಣಿಸಿ
ಅಕ್ಷರ ಕಲಿಯಲು ಶಾಲೆಗೆ ಕಳುಹಿಸಿ
ಫಸ್ಟ್ ಬಂದಾಗ ತಲೆನೇವರಿಸಿ
ಮಕ್ಕಳ ಒಳಿತಿಗಾಗಿ ಬೆವರ ಸುರಿಸಿ
ಬಾಳದೋಣಿ ನಡೆಸಿದ
ಪಿತೃವಿಗೆ ಹೃನ್ಮನದ ನುಡಿನಮನ

ಎಲ್ಲರ ಮನಪರಿತು ಅದರಂತೆ ನಡೆದು
ಯಾರಿಗೂ ನೋಯಿಸದ ಮನವ ಪಡೆದು
ಅಮ್ಮನಿಗೆ ಅಪ್ರತಿಮ ಆಧಾರ ಸ್ತಂಭವಾಗಿ
ಸಮಾಜಕ್ಕೆ ಜನಾರ್ಧನ ಸೇವಕನಾಗಿ
ಪರಿಸರಕ್ಕೆ ಪಹರೆಕಾದ ರಕ್ಷಕನಾಗಿ
ಬಾಳ ಬೆಳಗಿದ...ಪಿತೃವಿಗೆ ಹೃನ್ಮನದ ನುಡಿನಮನ

ಜೀವನದ ಸವಾಲಿಗೆ ನಡುಗದ
ಅನುದಿನದ ಬಿರುಗಾಳಿಗೆ ಹೆದರದ
ಪರರಿಗಾಗಿಯೇ ಪರಮತತ್ತ್ವವ ಪಾಲಿಸಿ
ಮಿಂಚುಹುಳುವಿನಂತೆ ಬದುಕ ಸವೆಸಿ
ಆದರ್ಶತೆಯ ಆಗಾಗೋಪುರವಾಗಿ
ಅನಂತತೆಯ ಪರಂಧಾಮದೆಡೆಗೆ
ಧಣಿವರಿತು ಪ್ರಾವಿಸಿದ ಸ್ವರ್ಗ ದೀಪಿಕೆಗೆ
ಹೃನ್ಮನದ ನುಡಿಮಾಲೆ

- ಶ್ರೀಮತಿ ಶಾಂತಶೀಲಾ, ಪಟ್ಟಹೊಳೆ

# ಕವನ ಹುಟ್ಟುತ್ತದೆ



ರವಿಯು ಕರಿಯ ಕಂಬಳಿ
ಸರಿಸಿದಾಗ...ಹಕ್ಕಿಗಳ ಚಿಲಿಪಿಲಿ ನಿನಾದ
ಎಲ್ಲರ ಚಿತ್ತ ದೈನಂದಿನ ಕಾಯಕದತ್ತ
ಇಲ್ಲಿ ನಮ್ಮೂರ ಕರಿಯ
ಗಾವುದ ದೂರದಿಂದ ಅರೆನಗ್ನವಾಗಿ
ಬಿರುಕು ಬಿಟ್ಟ ಬರಿಗಾಲಲ್ಲಿ
ನೀರು ಕಾಣದ ಮೈ- ಕಮಟು ವಾಸನೆ
ನಗರವನ್ನೆಲ್ಲಾ ಅಲೆದಲೆದು ಅವರಿವರು
ಕೊಟ್ಟ ಹಿಡಿ ಅನ್ನವ ತಿಂದು
ನಾಳೆಗಳಲ್ಲಿ ಮತ್ತೆ ಕಾಣ ಸಿಗುತ್ತಾನೆ
ಪ್ರಶ್ನೆಯಾಗಿ ಕಾಡಿ ಕವನ ಹುಟ್ಟುತ್ತದೆ !

ರಸ್ತೆ ಬದಿಯತೊಟ್ಟಿಯ ಬಳಿ
ಪೇಲವ ಮುಖಹೊತ್ತ ನೀರೆ
ಹರಿದ ಸೀರೆ ಕಂಕುಳಲ್ಲಿ ಮುಗ್ಧಕಂದ
ಬಗಲಲ್ಲಿ ಜೋತಾಡುವ ಚೀಲಾ
ಹಸಿದೊಡಲಾಳದಲ್ಲಿ...ಚಿಂದಿ ಹೆಕ್ಕುವುದ
ಕಂಡಾಗ ಮನ ಬಿಕ್ಕುತ್ತದೆ
ಆಗ ಕವನ ಹುಟ್ಟುತ್ತದೆ
ಹಾದಿಯಲ್ಲಿ ಎದುರಾಗುವ ಮಂದಿ
ಯಾವದೋ ದುಃಖ, ದುಮ್ಮಾನ, ಹತಾಶೆ
ಮಡುಗಟ್ಟಿದ ನೋವುಗಳಲ್ಲಿ
ಶತಪಥ ತಿರುಗುವಾಗ...ನಾನು
ಅವರೊಳಗೊಬ್ಬನಾಗಿ ಆಗ ಕವನ ಹುಟ್ಟುತ್ತದೆ

✍ ನ.ಲ ವಿಜಯ, ಸೋಮವಾರಪೇಟೆ

# ಗುಟ್ಟು-ನುಡಿಗಟ್ಟು



ಅನುಭಾವದೊಳಗುಟ್ಟು, ನುಡಿಗಟ್ಟು
ವಚನಗಳ ಸತ್ಯವನೆ ಕೂಡಿಟ್ಟು
ತಿರುವಿ ತೆಗೆಯ ವಚನಗಳ ಗುಟ್ಟು
ಮನುಜನ ಎದೆ ಮಿಡಿತವ ಹಿಡಿದಿಟ್ಟು

ಸತ್ವದಿಂದ ಮುಕ್ತರಾಗುವ ತನಕ
ಚಿಂತನೆಯಿಂದಮಂಥನದವರೆಗೆ
ಎಳೆದೊಯ್ಯುವ ರಥದ ಹಾಗೆ
ಬದುಕ ಹೊಲದಲಿ ಬಿತ್ತಿದ ಫಲದಕಳೆ

ಅನುಭಾವದ ಅನುಭಾವಿಗಳ ಅಂತರಂಗ
ಒಗ್ಗೂಡಿ ಕಟ್ಟಿದ ನಿಯತ್ತಿನ ಗುಟ್ಟು
ಸಂದೇಶ, ಉಪದೇಶ, ಕ್ರಿಯಾಶೀಲತೆಗೂ ಉಂಟು
ಟೀಕೆ, ಟಿಪ್ಪಣಿಗಳಿಗೆ ಪದಗಳ ಗಂಟು

ಕಾಯಕದೊಳಗೆ ಕೈವಲ್ಯದಾ ಯೋಗ ಸೂತ್ರ
ಸಮಸ್ಯೆಗಳ ಕಾರ್ವಣ್ಯಕ್ಕೆ ಅರ್ಥೈಸದ ಮಂತ್ರ
ಅಂತರ, ಹಂತದ ಮರೆಯಲಿರುವ ಸತ್ಯ
ಮಹಾನು ಭಾವದ ಕಲ್ಪನೆಗಳೂ ನಿತ್ಯ

ತನ್ನ ತಾನರಿತು ಮುನ್ನಡೆದ ಯೋಗಿ
ನಿಯತ್ತಿನ ನಿಯಮಕ್ಕೆ ಶಿರಬಾಗಿ
ಐಕ್ಯತೆಯನು ಉದಯಿಸುವ ಪ್ರತಿರೂಪಗಳೆ
ಕಟ್ಟು-ಕಟ್ಟುಗಳ ನಡುವೆ ಕೂಡಿಟ್ಟ, ನುಡಿಗಟ್ಟು

✍ ಹೇಮಲತಾ ಪೂರ್ಣ ಪ್ರಕಾಶ್, ಮಡಿಕೇರಿ

# ನಾ ಕಟೆದ ಭಗವಂತ



ಕಪ್ಪನೆಯ ಶಿಲೆಯೊಂದು ಬಿದ್ದಿತ್ತು ಹಾದಿಯ ಬದಿಯಲ್ಲಿ
ನಾ ಕಟೆಯುವ ಮನಸ್ಸು ಮಾಡುವವರೆಗೂ
ಕಟೆದೆ ಕಟೆದೆ ಕಟೆದೆ....ಕಟೆಯುತ್ತಲೇ ಇದ್ದೆ
ನಿರಾಕಾರಿ ಆಕಾರ ಪಡೆಯುವವರೆಗೂ

ಹಸಿದ ಹೊಟ್ಟೆಯ ತಾಳಹೆಚ್ಚಾದಾಗ
ನಾ ಕಟೆದ ನಿರಾಕಾರಿಯನ್ನೇ ವಿಕ್ರಯಿಸಿದೆ
ಕಲ್ಲುಗಳು ಬಂದವು, ಇಟ್ಟಿಗೆಗಳು ಬಂದವು,
ನೋಡನೋಡುತ್ತಲೆ ಮೇಲೆದ್ದವು ಗೋಡೆಗಳು
ಬಂಧಿಯೇ ಆಗಿಬಿಟ್ಟ ನಿರಾಕಾರಿ ಆ "ಗುಡಿ"ಯ ಒಳಗೆ!

ಹೆಂಗಳೆಯರು ಸೊಂಟದಲ್ಲಿ, ಶಿರದಲ್ಲಿ ಪೂರ್ಣಕುಂಭವ
ಹೊತ್ತುತರುತಿರಲು, ಹಸಿರು ತಳಿರುತೋರಣಗಳನು
ಬಿಗಿಯುತ್ತಿರಲು, ನಾ ಕಟೆದ ನಿರಾಕಾರಿಗೂ ಭಕ್ತಿ ಬಂದಿರಬಹುದೇನೋ!
ಪ್ರತಿಷ್ಠಾಪನೆಯ ದಿನ ಬಣ್ಣಬಣ್ಣದ ವೇಷಗಳೇನು!
ಪಂಡಿತರ ಕರ್ಣಗಳಿಗಿಂಪಾದ ಮಂತ್ರಘೋಷಗಳೇನು!
ಮುಗಿಲಿಗೆದ್ದ ಹೊಗೆಗೆ ಇಂದ್ರನೂ ಕೆಮ್ಮಿರಬಹುದು!

ನಾಸಿಕಕಂತೂ ಉದರ ತುಂಬಿಸುವ ಮೃಷ್ಟಾನ್ನದ ಪರಿಮಳ
ಊಟದ ಸರತಿಯನು ಹುಡುಕಿ ನೋಡುತ್ತಲೇ ಇದ್ದೆ
"ಛೇ, ಇವನಾರು ಕುಲೀನರ ಮಧ್ಯೆ ಎಲ್ಲಿಯವನೋ" ಅನ್ನುವವರೆಗೂ
ಕರಿಶಿಲೆಯಲ್ಲರಳಿದ ಭಗವಂತನ ದರ್ಶನವಾಗಿತ್ತು ನನಗಲ್ಲೇ....!!!

✍ ಕಿಗ್ಗಾಲು ಜಿ ಹರೀಶ್, ಮೂರ್ನಾಡು

# ಗುಲ್ ಮೊಹರ್



ಹಸಿರು ಮರದ ಮೇಲೆ ಕೆಂಬಣ್ಣದೋಕುಳಿ
ನಳನಳಿಸಿ ನಲಿವ ರಕ್ತಾಂಬರಿ
ಬಿಸಿಲ ಬೇಗೆಗೆ ಅಂಜದ
ಬಿಸಿಲ ಸುಂದರಿ ನೀ ಗುಲ್‌ಮೊಹರ್

ಚೈತ್ರದ ಆಗಮನದ ಸ್ವಾಗತವ ಸೂಸುವೇ
ಉರಿಯುತ್ತಿರುವ ನಯನಗಳಿಗೆ ತಂಪನ್ನೆರೆವೆ
ಬರಡಾದ ಮನಕೆ ಮುದವನ್ನು ನೀಡುವೆ
ಬಂಗಾರಿ ನೀ ಬಿಸಿಲ ಬಾಲೆ ಗುಲ್‌ಮೊಹರ್

ನಳನಳಿಸಿ ನಗುವೆ ಕೈಬೀಸಿ ಕರೆವೆ
ಬರಡಾದ ಭೂಮಿಯಲ್ಲಿ
ಮಳೆಯ ತಂಪ ಬಯಸದ
ನಯನ ಮನೋಹರಿ ನೀ ಗುಲ್‌ಮೊಹರ್

ಹಸಿರೆಲೆಗಳ ಮುಚ್ಚಿದ ಕೆಂಬಣ್ಣದ ಗೋಳವೆ
ಮುಳುಮುಳುಗುತ್ತಾ ನೋಡುತ್ತಿದೆ ಸೂರ್ಯಗೋಳ
ಮರದ ಮೇಲಿನ ಚೂರುಗಳು ತನ್ನದೆಂಬ ಭಯದಿಂದ
ಮೆತ್ತಮೆತ್ತಗೆ ಕೆಳ ಜಾರಿದೆ ದೂರ ಬೆಟ್ಟದ ಅಂಚಿನಿಂದ

ನಿನ್ನ ತಂಪಿನಲಿ ತಂಗಲು ಬಯಸಿದೆ ಮನ
ಉದುರದಿರು, ಆದುರದಿರು, ಬಾಡದಿರು ನೀ
ಧಗೆಯಲ್ಲಿ ಬೇಯುವ ಕಾಂಕ್ರೀಟ್ ಕಾಡಿನಲ್ಲಿ
ತಂಪನೀಡೆಮಗೆ ಸದಾ ನಿನ್ನೊಡಲಿನಲಿ

✍ ಎಂ.ಪಿ. ಪುಷ್ಪಲತ ಶಿವಪ್ಪ, ವೀರಾಜಪೇಟೆ

# ಬದುಕಿನ ತಿರುಗುತೊಟ್ಟಿಲು



ತಿರುಗುತೊಟ್ಟಿಲನೇರಿ ಹರುಷದಿ
ಭರನೆ ಬಾನಿನೆತ್ತರಕೇರಿ ಚಣದಲಿ
ದೂರದೂರಿನ ನೋಟ ಸವಿಸುವ
ಪೋರರಾಡುವ ಮೇಳ ಬಂದಿದೆ ನೋಡಿರೋ

"ಬನ್ನಿ ಮಕ್ಕಳೆ ಕುಳಿತು ನೋಡಿರಿ
ಬನ್ನವೆಲ್ಲವ ಮರೆತು ಸವಿಯಿರಿ
ನನ್ನಿಯಿದು, ನಿಮಗಿಲ್ಲಹುದು ಸಡಗರ"
ವೆನ್ನುತೆನ್ನುತ ಕೂಗಿಕರೆದಿದೆ ಬಂದು ಆಡಿರೋ

ಎತ್ತಿ ಜನರನು ಮೇಲಕೊಯ್ಯುತ
ಮತ್ತೆ ಅವರನು ಕೆಳಗೆ ಇಳಿಸುವ
ಸುತ್ತು ತಿರುಗುವ ತಿರುಗುತೊಟ್ಟಿಲ
ಗತ್ತನರಿಯುವ ತವಕವಿಹುದಿಲ್ಲಿ ಕೇಳಿರೋ

ಕಾಲಚಕ್ರದ ಅಕ್ಷ ಚಲಿಸಲು, ಮದದಲಿ
ಮೇಲಕೇರಿದ ರಭಸದಲ್ಲಿಯೆ
ಪಾತಾಳಕಿಳಿಯುವ ತತ್ತ್ವ ತಿಳಿಸುವ
ಬಾಳಪಾಠದ ತಿರುಗುತೊಟ್ಟಿಲಲೊಮ್ಮೆ ಆಡಿರೋ

ಬಡವ ಬಲ್ಲಿದರಂದೆಣಿಸದೆ
ತನ್ನೊಡಲಲ್ಲಿ ಬಂದವರನೇರಿಸಿಳಿಸುವ
ಅಡಿಗಡಿಗೂ ಬದುಕಿನ ಸಂದೇಶ ಸಾರುವ
ಹುಡುಗರಾಡುವ ತಿರುಗುತೊಟ್ಟಿಲು ಇದುವೆ ಕಾಣಿರೋ

✍ ಕಿಗ್ಗಾಲು ಎಸ್ ಗಿರೀಶ್, ಮೂರ್ನಾಡು

**ಕೊಡವ ಭಾಷೆ**

# ತಳ್ಳುವೊ ಬೋಂಡ ವಯಸ್ಸಂಗಳ

ತಳ್ಳುವೊ ಬೋಂಡ ನಂಗ
ಬಯತ್ ಕಾಲತ್ ಅಪ್ಪನವ್ವನ ದೂರ
ಅಯಿಂಗ ಕೂಡೆ ಇಂಜಕ ನಂಗಕೆನ್ನ್ ಭಾರ..!

ಪತ್ತ್ ತಿಂಗ ಕೆಲತ್ ಪೊರ್‌ತಿತ್
ಪೆತ್ತ್ ಚಾಕುವೊಕ್ ಕಷ್ಟಾಂದ್ ಅವು
ಮಕ್ಕಳ ಎಕ್ಕೇಂಗಿ ದೂರ ಚಾಡ್‌ಚಾ..?
ಸಾಲ-ಸೋಲ ಮಾಡಿತ್ ವಿದ್ಯೆ-ಬುದ್ಧಿ ತಂದಿತ್
ನಂಗಡ ಕಾಲ್‌ರ ಮೇಲೆ ನಂಗಳ ನಿಪ್ಪ್‌ಚಿಟ್ಟಿತಾಪಕ
ನಂಗಕ್ ಅವು ಬೋಂಡತಾಚಾ..?

ಚಾಕ್‌ಚಿ ಅಂದ್ ಪತ್ತ್ ಮಕ್ಕಳೋ
ಅಪ್ಪವ್ವೊ ಓರೇ ಪೋಲೆ ಭಾರೀ ಕುಶೀಲ್
ಆಚೇಂಗಿ ಇಂದ್ ಚಾಕ್‌ವೊಕ್‌ಕಯ್ಯತೆ
ಪತ್ತ್ ಮಕ್ಕಳೂ ಅಪ್ಪನವ್ವನ ಪಾಲ್

ಮೈಮಕ್ಕಳಾನ ನಂಗಕ್ ನಂಗಡಪ್ಪನವ್ವನೇ ದೇವ
ಪಾರಕಾಪ ನಂಗ ಈ ಮಾಂವ-ಮಾಂವಿ ಎಕ್ಕಚಾವಾ...?
ಅರ್‌ವದ್ ಕಯಿಂಜದೇ ಅರ್‌ಳೋ ಮರ್‌ಳೊ ಕಳಿಪ
'ಕಿರಿ-ಕಿರಿ, ಪಿರಿ-ಪಿರಿ' ಲ್ ನಂಗಡ ನೆಮ್ಮದಿಯೆ ಪಾಳಾಪ
ಇನ್ನನೇ ದೂರಿತ್ ನಂಗ ಅಯಿಂಗಳ ಬೆಂದು ಬಿಡಾರತಾಕ್‌ವ

ಇಂದ್ ನಂಗ ಮಕ್ಕ, ಮೈಮಕ್ಕ, ಆಯಿತಿಪ್ಪ
ನಾಳೆ ನಂಗಳೂ ಮಾಂವ- ಮಾಂವಿಯಾಪ
ಆಕ್ಕ ನಂಗಡ ಮಕ್ಕಕೂ ನಂಗ ಬೋಂಡತಾಪ
ನಂಗ ಮಾಡ್‌ನ ಕರ್ಮತ್‌ರ ಬೆಲೆ ಅಕ್ಕ ಗೊತ್ತಾಪ
ತಟ್ಟತಿರ ನಂಗಕೂ ಒನ್ನಾಂದ್ ಅಯಿಂಗಡ
ನೊಂಬಲತ್‌ರ ಶಾಪ

✍ ಶ್ರೀಮತಿ ಪಾಲೆರ ರಾಣಿ ಅಪ್ಪಣ್ಣ, ಬಲ್ಲಮಾವಟಿ

# ಮೌನತ್‌ರ ತಕ್ಕ್



ನೀರ್‌ರೊಳ್‌ಲ್ ಪರ್‌ಂಜಿಪ್ರೋನ ಬದ್‌ಕ್
ಜಡಿಮಳೆ ಪುಡ್‌ಚಿತ್ ಪುರ್‌ಡಿಲ್ಲೆ ಜೀವನತ್
ಒಕ್ಕಿತ್ ಬಾತ್ ಮಣ್ಣ್‌ನೀರ್
ಕಲ್‌ಂಗಿತ್ ತೆಳ್‌ಂಗ್‌ನದೇ ಇಲ್ಲೆ ಈ ಬಾಳ್‌ರ ನೀರ್
ಮನಸ್‌ರೊಳತ್‌ರ ಭಾವನೆಲುಳ್ಳ ತಕ್ಕ್, ಬಪ್ಪುಲೆ ಪೊರಮೆ

ತೊಂಡೆರೊಳಲ್ ಬತ್ತ್‌ನ ನೀರ್ ಮೌನತ್‌ರ ನೊಂಬಲ
ಪಯಿಬಕೆಲ ಕೊದಿಪ ಮನಸ್ಸ್
ಕರ್‌ಬಾಯಿಕ್ ಬಪ್ಪಂತ
ಕಣ್ಣ್‌ರೊಳಲ್ ಪೊಗೆಯಾಯಿತ್
ಮನ ನೊಂಬಲಾಪ ಕಥೆ

ಮೂಡ್‌ಲ್ ಕಾಂಬ ನೊಂಬಲತ್‌ರ ಗೆರೆ
ಆ ಗೆರೆಕ್ ನೂರ್ ತರತ್‌ರ ಅರ್ಥ
ನಿರಾಳ ನಿರಾಸೆರ ಗುರಿ ಇಲ್ಲತ ಬದ್‌ಕ್
ಒಡ್‌ಂದ ನೆಲ ಬತ್ತ್‌ನ ಬದ್‌ಕ್
ಮನಸ್ಸ್ ತಡಿ ಬೆಂಜ ಉರಿ

ಕಯಿಂಜ ಕಣ್ಣೀರ್‌ರ ಕಥೆ
ನಿಪ್ಪಕ್ ನೆಲೆ ಇಲ್ಲೆ ನಳಕಾಟುವಕ್ ಮರ ಇಲ್ಲೆ
ತಾಂಡ ಎಣ್ಣುವವು ದಾರೂ ಇಲ್ಲೆ
'ಮೌನ' ವಿಣ್ಣುವ ಪಕ್ಕ ಆಯಿಂತಿಂಜತ್
ಇದ್ ಕಣ್ಣೀರ್‌ರ ಕಥೆ

ಅರ್ಥ ಆಕತ ನೂರ್ ನೊಂಬಲತ್‌ರ ಕಥೆ
ಬೆಂಜ ಗೇನತ್‌ರ ಬದಕ್‌ರ ಕಥೆ
ಬೆಂಜ ಗೇನತ್‌ರ ಬದಕ್‌ರ ಕಥೆ
ನೀರ್‌ರೊಳಲ್ ಪರ್‌ಂಜ ಬದ್‌ಕ್‌ರ ಮೌನತ್‌ರ
ತಕ್ಕ್‌ರ ಕಥೆ

✍ ಕಾಳಿಮಾಡ ಮಮತ ಜಿನ, ಮಡಿಕೇರಿ

# ಮಳೆ ತುಳಿ



ಕಾಂಗತ ಲೋಕತ್‌ಂಜ ಬೂವ್ವಂತ ಮಳೆ ತುಳಿ
ಒಕ್ಕಿತ್ ಪರಿಯುವಿಯಾ ತೋಡ್ ಪೊಳೆಯಾಯಿತ್
ಆಕೀರಿಕ್ ಕೂಡುವಿಯಾ ಸಮುದ್ರತ್ ಅಲೆಯಾಯಿತ್
ಅಲ್ಲಿಯೂ ಮುಂಡತಿಕ್ಕತೆ ಬೆದ್‌ಕ್ ಆವಿಯಾಯಿ ಪೋಪಿಯಾ
ಇನ್ನನೇ ಕಾಲ ಇಡೀ ಕೆಜ್ಜಂಡೆ ಕಾಲ ಕೈಪಿಯಾ


ದಿನಕ್ಕೋರಂಧ್ ರಂಗ್‌ರಂಗ್‌ರ ರೂಪತ್‌ನ ಎಡ್‌ಪಿಯಾ
ಚೆಡಿ ಬಾತೆಂಗಿ ಗುಡುಗುವಿಯಾ
ಬೇಜಾರಾಚೆಂಗಿ ಮೊರಡುವಿಯಾ
ಖುಷಿ ಆಚೇಂಗಿ ಮಿನ್‌ಂಗಿ ವಿಲಂಗುವಿಯಾ
ಬಜ್ಜತೆಂಗಿ ನೀನ್ ನೀಡ ರುದ್ರ ಅವತಾರ ಕಾಟುವಿಯಾ

ತಾಂಡಯಿಂಗ ಬೋರೆಯಿಂಗ ಎಣ್ಣ್‌ವ ಚೋರೆ ಬೇದ ನೀಕಿಲ್ಲೆ
ಕೇರಿ ಊರ್ ದೇಶ ಎಣ್ಣುವ ಕೆಟ್ಟಂತೂ ನೀಕಿಲ್ಲೆ
ಜಬ್ಬೂಮಿಲ್ ಎಲ್ಲಿಯೂ ನಿನ್ನ ಕಾಂಗತಯಿಂಗಳೆ ಇಲ್ಲೆ
ನೀ ಪೋಕತ ಮಣ್ಣ್ ಎಂದಿಕೂ ಚಾಯಿಪ್ಪುಲ್ಲೆ
ಮಳೆ ಪೊಜ್ಜಿತ್ ಮಕ್ಕಳಾಯಿತ್ ದಾರು ಪಾಳಾಪ್‌ಲೆ

ಕಣ್ಣ್‌ಕ್ ರಂಗಿಲ್ಲೆ ಬಾಯಿಕ್ ಚೋದಿಲ್ಲೆ
ಪುಟ್ಟುವದ್ ಕಾಂಬ್‌ಲೆ ಬೊಳಿಯುವದ್ ಕಾಂಬ್‌ಲೆ
ಆಚೇಂಗಿ ನೀ ಬೋಂಡು ಏಳ್‌ಏಳ್ ಲೋಕಕೂ
ಆಯಿರಾಯಿರ ಕಾಲತ್‌ಂಜಲೆ ಭೂಮಿಕ್ ಬಪ್ಪಿಯಾ
ಸುಖ ಶಾಂತಿ ನೆಮ್ಮದಿ ಎಲ್ಲಾರ್‌ಕೂ ತಪ್ಪಿಯಾ

✍ ನಳಿನಾಕ್ಷಿ ಎಂ.ಕೆ, ವೀರಾಜಪೇಟೆ

# ಮಣ್ಣ್‌ನ ಮರ್‌ಕತಿ



ಕೊಡಗ್‌ರ ಮಣ್ಣ್‌ಲ್ ನೈಕನ ಎಂಗ
ಕಂಡವಂಗ್ ನೈಪಕ್ ಪೋಪಿರ ನಿಂಗ
ನಂಗಡ ಮಣ್ಣ್‌ಲೇ ನೈಚಿತ್ ನೈಕೂಳ್ ಉಂಗ


ಕೊಡಗ್‌ಲ್ ಉಂಡೇಂಗೂ ಆಸ್ತಿಪಾಸ್ತಿ
ಎನ್ನಂಗ್ ಪೋಪಿರ ಪೊರಮೆಕೇ ಜಾಸ್ತಿ
ಕಂಡವು ಬಂದಿತ್ ಮಾಡ್‌ವ ಇಲ್ಲಿ ಮಸ್ತಿ

ಪುಂಡ ಪೋಕರಿಯಳ ಮಾಡಿಯೊತಿ ಫ್ರೆಂಡ್
ಅವು ಬಯ್ಯಂಜ ಮಾಡ್‌ವ ನಿಂಗಳ ಬೆಂಡ್
ತೋಟತ್ ಫ್ರೆಂಡಾಯಿತ್ ಕಾಪಿಗಿಡ ಉಂಡ್


ಕೊಡಗ್‌ರ ಪೊರಮೆ ಎಲ್ಲಿಯೇಂಗಿ ಇರಿ
ಎಕ್ಕಲೂ ಗೌಜಿಲ್ ಉಂಡತೇಂಗೂ ಸರಿ
ಗೇನ ಬಂತೇ ಬಪ್ಪ ಕೊಡಗ್‌ರ ಕೇಂಬುಕರಿ

ಕೊಡಗ್‌ರ ಪೊನ್ನ್‌ಭೂಮಿ ಬುಡತಿ ನಿಂಗ
ಪೊರ ಜಾತಿ ಮಂಗಲ ಕೈಕತಿ ಪೊಂಗ
ನಮ್ಮ ನಾಳ್‌ಲ್ ಕಾಲೋದಿ ಕಾಂಗನ ಎಂಗ

✍ ನಂಬಿಯಪಂಡ ರಂಜು ನಾಣಯ್ಯ, ಬೆಂಗಳೂರು



# ವರಕವಿ ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ



ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ
ಕೊಡಗ್'ರ ನಡೆಕ್ಕಾಲೆ ನಡಂದ್ ಬಾ
ಈ ನಾಡ್'ರ ನಲ್ಲಾಮೆಕಾಯ್ತ್ ಬಾ
"ವರಕವಿ" ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ

ಅಂದುಳ್ಳ ಕೊಡಗ್ ಇಂದಿಲ್ಲೆಲಾ
ಆಯಿಮೆ ಕೊಯಿಮೆ ಕಮ್ಮಿಯಾಯ್ತಲಾ
ಒಬ್ಬನ ಕಂಡಕ ಇಂಞ್ಞೊಬ್ಬಂಗಾಗ
ಇಂಞ್ಞೊಬ್ಬ ನಂದಾಪ ನೇರಾಯ್ತು ಆಗ
ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ
"ವರಕವಿ" ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ

ಕೊಡವ ಮಾಜನಕಿಂದ್ ಕೊಡವಳೇ ಶತ್ರು
ಕೊಡವಡೇತರ ಜನ ಅಯಿಂಗುಂಡ್ ಮಿತ್ರ
ಚಾಚೆ ಸಾಲುಲೂ ಇಂದ್ ಕೊಡವಕೇ ಕುತ್ತ್
ಪೊರಜಾತಿ ಮಂಗಲ ಅದಿಯಾಯಿ ಪೊಯ್ತು
ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ
"ವರಕವಿ" ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ

ನೀಕಂಡ ಆ ಸ್ವಪ್ನ ನೇರಾಕಡ್
ನೀ ಎಳ್ದನ ಎಳ್ತೆಲ್ಲ ಅಚ್ಚಾಯಿ ಬರಡ್
ಕೊಡವಕ್ ಸುಖ ಶಾಂತಿ ನೆಮ್ಮದಿ ತರಡ್
ಇದುನುಂಡ್ ಕೊಡಗ್'ರ ಉದ್ದಾರ ಅಡ್
ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ
"ವರಕವಿ" ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ

ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ
ಕೊಡಗ್'ರ ನಡೆಕ್ಕಾಲೆ ನಡಂದ್ ಬಾ
ಈ ನಾಡ್'ರ ನಲ್ಲಾಮೆಕ್ಕಯ್ತ್ ಬಾ
"ವರಕವಿ" ಅಪ್ಪಚ್ಚ ಇಂಞ್ಞೊಮ್ಮ ಪುಟ್ಟಿ ಬಾ

✍ ಕರವಟ್ಟೀರ ಬಿ. ಐಯ್ಯಣ್ಣ,
ಚೆನ್ನಯ್ಯನಕೋಟೆ

ಅರೆಭಾಷೆ ಕವನ

# ಕಲಿಗಾಲ



ಅಂದಿತ್ತ್ ಒಬ್ಬ ರಾವಣ....
ಸೀತೆನ ಹಾರ್ಸಿಕಂಡೋತ್
ಅವಳ ಪೊರ್ಲಿಗೆ ಮನಸೋತ್
ಮನ್ಸ್‌ಲಿ ಕೊರಿಕೆ ಮಾಡ್ತ್ ಶತ ಪ್ರಯತ್ನ
ಒಮ್ಮೆ ಸನ ಮುಟ್ಟಿತ್ಲೆ ಅವಳ ಹಸಿ ಮೈನ
ಪತಿವ್ರತೆ ಸಾಧ್ವಿಗಡ ಆ ರಾಮನ ಹೆಣ್ಣ್
ಸುರ್ಸಿದ ಕಣ್ಣೀರ್ ಮಾಡ್ತ್ ರಾವಣನ ಮಣ್ಣ್
ದಸರಲಿ ಆತ್‌ಗಡ ದುಷ್ಟ ಸಂಹಾರ
ರಾಮಂಗೆ ಬಲಿಯಾತ್ ರಾವಣ ಪರಿವಾರ

ಇಂದೂ ಒಳೊ ನೂರಾರ್ ರಾವಣಗ...
ಸಣ್ಣ ಕೂಸೂಂತ ನೋಡ್ದುಲೆ
ಹೆಣ್ಣ್ ಮುದ್ಕಿನೂ ಬುಡ್ದುಲೆ
ಬಿಕ್ಕಳಿಕೆ ಉಮ್ಮಳ್ಸಿ ಬಾತ್ ಕಣ್ಣೀರ್
ಯಮಯಾತನೆ ಬ್ಯಾನೆ ಕೇಳ್ದವು ಯಾರ್?
ಕಾಂಬಂತ ರಾವಣ್‌ರಿಗೆ ಹತ್ತ್ ತಲೆ ಇಲ್ಲೆ
ಹಾಕುವೆ ಲೋಕಲಿ ದುರಾಚಾರದ ಶಿಳ್ಳೆ
ಹುಟ್ಟಿತ್ಲೆ ಇಂದಿಲ್ಲಿ ವೀರ ರಾಮಂಗ
ಅವರ್ದ್ದಷ್ಟೇ ಅವ್ಕಾತ್, ಎಲ್ಲಾ ಸ್ವಾರ್ಥಿಗ

ಯಾರೋ ಮಾಡ್ದ ಪಾಪ ಎಲ್ಲೋ ಕಂಡದೆ...
ನಿಟ್ಟುಸ್ರು ಭೂಮಿನ ಅಡಿಮೇಲ್ ಮಾಡ್ದೆ
ಅವ್ವನ ಮೊಲೆತೊಟ್ಟ್‌ಲೂ ವಿಷ ಬಾವ ಕಾಲ
ಬುಟ್ಟಿತ್ಲೆ ಕಾಶ್ಮೀರನೂ ನಮ್ಮ ಕರ್ಮದ ಫಲ
ಬಾಚಿ ಕೂಸ್‌ನ ಅಪ್ಪ ತಬ್ಬಿಕಣ್‌ಕನ
ಕಾಡ್ತ್ ಅನುಮಾನ, ಈ ಕಲಿಗಾಲ ಕಾರಣ
ಯಾಗ ನಿತ್ತದೆ ಇಂಥ ಕೆಟ್ಟ ಕಾರಭಾರ
ರಾಮರಾಜ್ಯನ ಕೊಂದ ಕೀಳ್ ಅನಾಚಾರ
ಯಾವ ಪುಣ್ಯದ ಫಲ ತಗ್ಗಿಸಿದೆ ಭಾರ???

✍ ಲೀಲಾ ದಯಾನಂದ ಕೊಟ್ಟುಕೇರಿಯನ, ಮಡಿಕೇರಿ

# ಒಡಹುಟ್ಟಿದವು



ಹಸಿರ್‌ನ ಉಸಿರಾಡೋ ಗಿಡದ ಕರ್‌ಳ್ ಬಳ್ಳಿಲಿ
ಚಿಗುರೋ ಎಳೆಎಲೆಯ ಕೂಸಾಗಿ ಹುಟ್ಟ್‌ತಾ ಬೆಳ್ದೋ
ಒಡಲೊಳಗಿರೊ ಮಂದಹಾಸದ ಕ್ಷೀರಾಭಿಷೇಕಲಿ
ದೇವ್‌ರೆ ಕಾಣದ ಮುಗ್ಧತೆಲಿ ಆಡಿ ನಲ್‌ದಾಡ್ದೋ

ಸಣ್ಣತನದ ಮುಗ್ಧಮೂದಲಿಕೆಲಿ ತಿಳ್‌ಕಣ್‌ತ್‌ಲೆ ಬಾಳ್‌ಲಿ
ಪ್ರಾಯ ಯೌವನತ ವಯ್‌ಸ್‌ಲಿ ಬಾಕಾಕ್‌ನ
ಮದ್ವೆನು ನನ್‌ಸಾತ್ ಹಿರಿಯರ್ ಹರ್‌ಸಿದ ಅಕ್ಷತೆಕಾಳ್‌ಲಿ
ಖುಷಿಪಟ್ಟೋ ಸಣ್ಣ-ಕೂಸ್‌ಗಳೆ ಅಪ್ಪಂದ್‌ರಾಕನ

ಇಂದ್, ನಾಳೆ, ನಾಡಿದ್‌ತ ದಿನ ಹೋತು
ಅಲ್ಲಿ ಶುರಾತ್ ಮೈ- ಮನಸ್ ಒಡೆಯಕೆ
ಕಾಲ್ಕೆಳಗೆ ದ್ವೇಷ ಬೀಜನ ಬಿತ್‌ತ್ತ ಕಿತ್ತೋ
ಅಪ್ಪನ ಆಸ್ತೀಲಿ ಪಾಲ್ ಬೇರ್ ಸಮೇತ ಆಯಕೆ

ನಾಲ್‌ಗೆನ ಚೂಪ್‌ಕತ್ತಿನಂಗೆ ಚುಚ್ಚಿಕಂಡೋ
ಸಂಸಾರ ನೌಕೆನ ಸಮುದ್ರದೊಳಗೆ ಮುಳ್‌ಗಿಕಿಟ್ಟೊ
ಕರ್‌ಳ್- ಕುಡಿಗ, ಅಪ್ಪ-ಅವ್ವನೂ ಬಲೆಯೊಳಗೆ ಸಿಕ್ಕಂಡೊ
ಒಗ್ಗಟ್‌ನ ಮುರ್‌ದ್ ಉಸ್‌ರ್ ನಿಲ್ಲೋ ಕಿಚ್ಚಿಟ್ಟೊ

ಕೆಟ್ಟದಾಕೆ ಸೆಕೆಂಡಾಕ್, ಒಳ್ಳೆದ್‌ಕೆ ವರ್ಷಾನೆ ಬೇಕು
ಅಣ್ಣ-ತಮ್ಮ ಜಾಗಕೆ ಹೆಬ್ಬುಲಿಗಳಾಗಿ ಹಗೆಯ ರಿಪುಲಿ
ರಾಮ-ಲಕ್ಷ್ಮಣ ಇಲ್ಲೆ, ಲವ-ಕುಶ ಇಲ್ಲೆ, ಕಾಣದ ಲೋಕಕೆ
ಜೀವಕೊಟ್ಟಿ, ದೇವ್‌ರ್‌ಗಳ ಜೀವಕೆ ನೀರ ಹನಿಯಿಲ್ಲದೆ ???

...ಪಯಣ....

ರಂಜಿತ್ ದಾಮೋದರ್ ಕುದುಪಜೆ, ತಣ್ಣೆಮಾನಿ

# ಹೊತಾರೆನ ಗಳಿಗೆ



ದೂರ ಕುಂದ್ ಸಾಲ್‌ನ ನಡುಲಿ
ಮಿಂಚುವ ತಿಳಿ ಆಕಾಶ
ಅದರ ಸೆರೇಂದ ಪೊರ್ಳ್ನನ
ನೆಗೆ ಸೂಸಿ ಬಂದಿಯಾ ನೀನ್

ಪೊರ್ಳ್ನನ ಅರೆ ಅರ್ಳಿದ ಹೂ ಮೊಗ್ಗ್ಗಗ
ಪ್ರಕೃತಿ ದೇವಿಗೆ ತಲೆ ಬಗ್ಗ್‌ಸ್‌ಕನ
ಕುಶೀಂದ ಅದರ ನೋಡ್ವ ನಿನ್ನ
ತುಟಿಗಳ ಸೆರೇಲಿ ಬರುವ ಅರೆನಗೆ

ಜೇಡರ ಹುಳಗ ನೆಯ್ದಿದ್ದೊ ತೋರಣನ
ಇಬ್ಬ್‌ನಿ ಹೆಣ್ದಿತ್ತ್ ಮುತ್ತ್‌ನ ಮಣಿಗಳ
ಸೆರೇಂದ ಕಾಂಬಿಕನ ಕಾಮನ ಬಿಲ್ಲ್‌ನ
ಹಕ್ಕಿಗ ಹಾಡಿದ್ದೊ ನಿಂಗೆ ಆರತಿ ಹಾಡ್‌ನ

ಎಂತಾ ಅಪರೂಪದ ಪೊರ್ಳ್ನ ನಿಂದ್
ಇಬ್ಬ್‌ನಿಲಿ ಮೀದ್ ಎದ್ದ
ದಿಬ್ಬಣದ ಮದು ಮಂಜನಂತಾ
ಶೃಂಗಾರ ನಿಂದ್

ಮುದ್ದಾದ ಚಂದಮಾಮನ ಕಳ್ಸಿ
ನಿಂಗಾಗಿ ಕಾಯುವ ಪ್ರಕೃತಿ ಸಿರಿನ
ನಿದ್ದೆ ಬುಟ್ಟ ಕಣ್ಣ್‌ಲಿ ಕಂಡ
ಹೊತ್ತಾರೆನ ಆ ಗಳಿಗೆ ತಾನೇ ಸ್ವರ್ಗ

✍ ಕಡ್ಲೇರ ತುಳಸಿ ಮೋಹನ್, ಬೆಟ್ಟಗೇರಿ

# ಬಾಲ್ಯ ವಿವಾಹ



ಆಡುವ ವಯಸ್ಸ್ ಈ ಗೂಡೆಗೆ
ಈಗಲೇ ಏಕೆ ಮಾಡ್ದರೀ ಮದುವೆ

ನೂರಾರು ಕನ್ಸ್‌ಗ ತುಂಬ್ಯಿಟ್ಟು ಮನಸ್‌ಲಿ
ನನ್ನಾಕೆ ಮುಂದೆನೇ ಏಕೆ ಒಡ್ದರೀ

ದೇಹ ಮನ್ಸ್‌ಗಳೆರಡ್‌ಮೊಗ್ಗ್
ಅರಳಿಕೆ ಮುಂದೆನೇ ಬದುಕ್ ಸಿಗ್ಗ್

ಸಂಸಾರ ಭಾರನ ಹೊರಿಕೆ ಆದುಲೆ
ಅಪ್ಪ ಅವ್ವನ ಗ್ಯಾನನೂ ಬುಡ್ದುಲೆ

ದಿನಾ ಕಣ್ಣೀರ್‌ಲೇ ಕೈ ತೊಳ್ದದೆ
ಹೇಳಿಕೆ ಆಗದ ಸಂಕಟ ಪಟ್ಟದೆ

ಸಿನೇತಂಗೆಲ್ಲಾ ಖುಷಿಯಾಗಿ ಬೆಳಿತೊಳೊ
ಇವ್ರಿಗೆ ಬಂದುಟ್ಟ್ ಅಕಾಲಿಕ ಮುಪ್ಪ್

ಜೊತೆನ ಮಕ್ಕೆಲ್ಲಾ ಉಟ್ಟು ತೊಟ್ಟು ನಲಿತೊಳೋ
ಯಾವ ಚಿಂತೆ ಇಲ್ಲದೆ ಹಾಯಾಗಿ ಕಳೀತೊಳೋ

ಆಟ ಪಾಠ ಹಾಡಲಿ ಅವರ ಸೇರಿಕೆ ಆಸೆ
ಮನೆ ಹೊಸ್ತಿಲು ದಾಟಿಕೆ ಮನ್ಸ್‌ಲಿ ಹೆದ್ರಿಕೆ

ಹೆಣ್ಣಿನ ಶೋಷಣೆ ಲೋಕಲಿ ನಾನಾ ರೀತಿ
ಅವಳ ಆಸೆ ಬಯಕೆಗಳಿಗೆ ಕವಡೆ ಕಾಸು ನೀಡದೆ

ಎಂದಿಗೂ ಮಾಡ್ಬೇಡಿ ಬಾಲೆಗೆ ಮದುವೆ
ಮಾಡ್ರೆ ಅದೇ, ಅದೇ ಅವಳಿಗೆ ನೇಣ್ ಕುಣಿಕೆ

✍ ಪರಿಚನ ತೇಜಸ್ವಿನಿ ಕಿರಣ್, ಮಡಿಕೇರಿ

# ಬಾಳ್-ಬದ್ಕ್



ಬಾಳ್ ಬದ್ಕ್‌ನ ಅಂಗ್‌ಳಲಿ
ನಾವ್-ನೀವ್‌ಗ ಆಡ್‌ವ ಜೂಟಾಟ
ನೀ ಹುಡ್‌ಕುವ ಅಂಸರಲಿ
ಎಡ್ಗಿ ಬೀಳ್ ಬಡಾ ಓ ಗೆಳ್‌ಯ

ಅಣ್ಣ-ತಂಗೆ, ಅಕ್ಕ -ತಮ್ಮ
ತೇಳ್‌ವ ಬಾಳ್ ನಮ್ಮದಾಗಿರ್‌ಕನ
ಹಾಂಕರದ ಬಾಳ್
ನಿಂಗ್ಯಾಕೆ ಓ ಗೆಳ್‌ಯ



ಹುಟ್ಟ್- ಸಾವ್‌ನ ನಡುಲಿ
ಅಂತರ ಬಲು ದೂರ ಆಗಿರ್‌ದು
ಮಾಸ್‌ಲ್ ಮನ್‌ಸ್‌ನ ತೊಳ್‌ದ್
ಲಾಯ್ಕಲಿ ಬಾಳ್ ಓ ಗೆಳ್‌ಯ

ಮೂರೇ ದಿನದ ಬದ್ಕ್‌ಲಿ
ಕಲೆವ ಪಾಠಗ ನೂರಾರ್
ಹುಟ್ಟ್‌ವ ಪ್ರಶ್ನೆಗ ಹತ್ತಾರ್
ಪ್ರಶ್ನೆಗೆ ಉತ್ತರ ಹುಡ್ಕ್‌ಕನ
ಬದ್ಕೇ ಒಂದ್ ಪ್ರಶ್ನೆ
ಆಗದೇ ಇರ್‌ಲಿ ಓ ಗೆಳ್‌ಯ


✍ ಕಡ್ಲೇರ ಜಯಲಕ್ಷ್ಮಿ ಮೋಹನ್ ಕುಮಾರ್, ಬೆಟ್ಟಗೇರಿ

# ದೀಟಿಗೆ

ಪಚ್ಚೆ-ಪಚ್ಚೆಗ್‌ಲಾ
ಪಚ್ಚೆ ಪದುರೊಂದು ತೆಲಿಪಿನಾ
ಸಾದಿನ್ ತೂಲ...
ಪಜಿರ ಬೊಲ್ಬುಗು ತೆಲಿಪಿನಾ
ಸಾದಿನ್ ತೂಲ...

ಅಂಚನೇ ತೂಲ... ಕಣ್‌ನಿಲಿಕೆ ತೂಲ...
ಸತ್ಯೊಪೊಂಜಿ ನಿರೆಲಾಕಿಜಿಂಡ
ನಿನ್ನ ಕಣ್ಣ್ ಕಣ್ಣತ್ತ್...
ಮೈಡ್ ರೋಮ ಕುತ್ತೇರಿಜಿಂಡ
ನಿನಪೊಂಜಿ ಜೂಪ ಅತ್ತ್...

ಏರ್ ಮಲ್ದೆರೋ ಪೊರ್ಲ್‌ಕಂಟ್‌ದ
ಸಾದಿಬ್ ?
ಏರ್ ಮಣ್ಣ್ ಸೇರ್ಯೆರೋ
ದಿಂಜಯೆರೆನ್ಕ್ ಜೀಪಸತ್ತೊನು ?
ಈ ಪಜಿರ್ ಕಣ್ಣ್‌ಡ್
ಪುರು ಜೋಕ್ಲೆನಾ ತೆಲಿಕೆ...
ನಮ್ಮ ಕಣ್ಣ್‌ಡ್
ಪೊತ ಬೊಳಿ ಬೊಳಿಕೆ...




ತೂಲ...!
ಬಗ್ಗಿನಕುಲೆನ ಅರ್ಕತ್ತುಂಡು...
ಬಿರ್ಸೆರೆನ ಬಲವುಂಡು...
ನಂಜಿದಾಂತಿನಕುಲೆನ ಉಡಲುಂಡು
ಈ ಸಾದಿಬ್...

ತಗ್ಗ್ ನಡತ್‌ಂಡ
ಬಗ್ಗ್ ಬಲತ್‌ಂಡ
ಸಾದಿ ಕಡಿಯಂದ್ ಎಲ್ಲೆಗ್
ಅವ್ವೇ ದೀಟಿಗೆ ಬದ್‌ಕ್‌ಗ್

ರಮ್ಯ ಕೆ.ಜೆ, ಮೂರ್ನಾಡು

# ಸಾದಿ ಮೂಲುಂಡು



ತೆಲಿಕೆದ ನಲಿಕೆ ಮೊನೆಗ್
ದೇವೆರ್ ತೀರ್ಪುಕೊರ್ಪಿನ ಬದ್ಕ್‌ಗ್
ಇನಿ ಕೋಡೆ ಮಾನ್ಪುನ ಯೋಚನೆಗ್
ಸಾವಧಾನದ ಆಧಾರೊಗು ಪ್ರಮಾಣ ಮಾನ್ಪುಗ

ವಿಷಯೋನ್ ಮನಸ್ ಮುಚ್ಚಿದಿಡ್ತ್
ಆಚಾರೊಗ್ ಒಂತೆ ಅಡ್ಡಿ ಮಾಂತ್ಡ್
ದೌರ್ಜನ್ಯಗ್ ನಮ ಮಣೆ ಪಾಡ್ನಗ
ದೇವೆರ್ ನಮಕ್ಲೆಗ್ ಶಾಪ ಪಾಡ್ವೆರ್

ಇನಿತ್ತ ದಿನೊಟ್ಟು ಬೇಲೆ ಮಾನ್ಪೆರ
ಕೈ ಕಾರ್ ಡ್ ತ್ರಾಣ ಇತ್‌ಂಡಲ
ರಟ್ಟೆ ಬಂಜಿಗ್ ಕಷ್ಟ ಇಜ್ಜಂಡಲ
ಅನ್ನ ಸಾದಿಗ್ ದಾಯೆ ಬೂರ್ವರ್

ಸಾಂಸ್ಕೃತಿಕ ಪರಂಪರೆಡ್ ಮಾಯೆರ
ಮನಸ್ ನಮ್ಮ ಮುಗಲ್ದ ಚಲನೆಡ್
ಕಾರ್ಯ ಮಾನ್ಪೊಡು ಚರ್ಚೆ ಮಾನ್ಪೊಡು
ಉತ್ಸವದ ಪ್ರದರ್ಶನೊಗ್ ಗುಣಗಾನ

ಅಸ್ವಸ್ಥ ಮನಸ್‌ಗ್ ಅಂತ್ಯ ಪಾಡ್ದ್
ಸುಳ್ಳು ಮೋಸಗ್ ಎಪೊಗ್ಲ ಬಣ್ಣ ಬೊಡ್ಚಿತ್ತೆ
ದುರಂತದ ಬಲೆಗ್ ಬೂರ್ಯೆರಗ್ ದುಂಬು
ಸ್ಪಷ್ಟ ಯಶಸ್ಸಿಗ್ ಹೋರಾಟ ಮಾನ್ಪುಗ ಬಲೆ

✍ ಬಿ.ಎಸ್. ಸತೀಶ್ ಸೋಮಪ್ಪ ನಾಕೂರು, ಸುಂಟಿಕೊಪ್ಪ

**ಜೇನು ಕುರುಬ ಭಾಷೆ**

# ಅಣ್ಣಾಗಿ ಹುಟ್ಟಿರುದೇ ತಪ್ಪಾ ?



ಅಣ್ಣು ಕೂಸೊಂದು ಅಳುತ್ತಾ ಕಾಳಿತದೆ
ಆ ಮಾವ ನನಗು ಯಾಕ ಅಂಗೆ ಮಾಡಿದ?
ನನ್ನ ಬಟ್ಟೆ ಅರ್‌ದೊಡೆ ಕಚ್ಚಿ
ಗಾಯ ಮಾಡಿ ಅಳಾಗ ಬುಟ್ಟು ಓಡಿ ಓದ
ಅಂತ ನನ್ನನೆ ಕಾಳಿ ತದಿಗೆ

ಬಳುವ ಅಣ್ಣು ಮಗ ಒಬ್ಬ ಕಾಳಿತಳೆ
ನಾಕ್ಕೈದು ಜನ ಗುಂಪುಲೆ ಅಳ್‌ತಾಡಿ
ಹಿಂಸೆ ಮಾಡಿದರು ಗಿಳ್ಸ ಬಟ್ಟೆಲು
ನನ್ನನೆ ಅಳುಕಿಂದ ಕಾಳಿತಲೆ
ನಾ ಯಾನಾ ಆಳಲಿ..?



ಸೌದೆಗೆ ವಾದ ಸಿದ್ಧಿಯಮ್ಮ ಓಡಿಬಂದು
ಆ ಬೋಜನೆ ಇಡಿಯಲೆ ಬಂದೆ
ದೊಣ್ಣೆಲು ವೀದು ಓಡಿ ಬಂದೆ
ನನ್ನ ಕಾಲೇ ಬರಾಕಿಲ್ಲೆ ಅಂತ
ತಲೆ ತಲೆ ಬಡ್‌ಕೊಂಡು ಅಳ್‌ತಾ ಆಳಿತಳೆ
ನಾ ಎಂಗೆ ಸಮಾದಾನ ಮಾಡಲೀ...?

ಭಾಷೆ ಗೊತ್ತಿಲ್ಲದ ಹುಚ್ಚಿಯೊಬ್ಬ
ರಾತ್ರಿಯೆಲ್ಲಾ ಕಿರುಸಿ ಕಿರುಸಿ
ಬಸುರಿಯಾದ ಕಥೆ ನೋಡಿ
ನಾ ಎಂಗೆ ನೆಮ್ಮದಿಯಾಗಿರಲಿ...?

✍ ಸುನಿತಾಲೋಕೇಶ್, ಕುಶಾಲನಗರ

**ಹವ್ಯಕ ಭಾಷೆ ಕವನ**

# ಎನಗೊಂದು ಅನುಮಾನ !



ಮನ್ನೆ ಮಳೆಗಾಲಲ್ಲಿಯೊಂದು ಉದಯಪ್ಪಗ
ಭೂಮಿಯ ಒಟ್ಟಿಂಗೆ ಆಡುವ ಮಳೆ ಕಂಡು
ಸೂರ್ಯ ಈಗೊಂದರಿ ಮತ್ತೊಂದರಿ ಮೋಡದ ಎಡೆಂದ
ಬಗ್ಗಿ ಬಗ್ಗಿ ನೋಡಿ ನೆಗೆ ಮಾಡಿಗೊಂಡಿತ್ತು

"ಕೊಡೆ ಇಂದೆಂತಕ್ಕ? ಸುಮ್ಮನೆ ಕೈಗೊಂದು ಭಾರ"
ಬರೀ ಚೀಲ ಹಿಡ್ಕೊಂಡು ಎನ್ನ ಅರ್ಧಾಂಗಿಯೊಟ್ಟಿಂಗೆ ಸಂತಗೆ ಹೆರಟೆ
ನೆಗೆ ಮಾಡುವ ಸೂರ್ಯನ ಕೆಣಕುವ ಮಳೆ
ಮತ್ತೆ ಪಿರಿಪಿರಿ ಹೇಳಿ ಬಪ್ಪಲೆ ಸುರುವಾತು
"ಛೇ, ಕೊಡೆ ತರೆಕ್ಕಾತು, ಇನ್ನೆಂತ ಗತಿ, ಮಳೆ ಜೋರು"
ಹೇಳಿ ರಕ್ಷಣೆಗೆ ಅತ್ತಿತ್ತ ನೋಡುವಗ
ಕಂಡತ್ತು ಅಲ್ಲೊಂದು ಮುರುಕ ಧರ್ಮಶಾಲೆಯ ಸೂರು !

"ಸಧ್ಯ ಬಚಾವು" ಹೇಳಿ ಬೇಗ ಅಲ್ಲಿಗೆ ಹೋಪಾಗ
ಎಂಗಳ ಹಾಂಗೆ ಮಳೆಗೆ ಒಂದು ಕತ್ತೆಯೂ
ಆ ಸೂರಡಿಲಿ ನಿಂತುಗೊಂಡಿತ್ತು

"ಕತ್ತೆಯ ಹತ್ತರೆ ನಾವು ನಿಂಬದೆ ! ಎಂತ ನಾಚಿಕೆ,
ನೋಡಿದವು ನೆಗೆ ಮಾಡುಗು "ಹೇಳಿ ಅರ್ಧಾಂಗಿ ಮೀನ ಮೇಷ ಲೆಕ್ಕಹಾಕುವಾಗ
ಆ ಕತ್ತೆ ಓರೆಕಣ್ಣಿಲಿ ನೋಡಿ ಕಿರಿಚಿಕೊಂಡು ಹೆರಟತ್ತಲ್ಲಿಂದ !
ಎಂತ ಈ ಹಾಳಾದ ಕತ್ತೆ ಹೀಂಗೆ ಕಿರುಚುದು? ಗೊಂತಿಲ್ಲೆ !
"ಈ ಮನುಷ್ಯರ ಒಟ್ಟಿಂಗೆ ನಿಂದರೆ ಎನಗೇ ಅವಮಾನ"
ಹೇಳುವ ಅರ್ಥದಲ್ಲಿ ಆದಿಕ್ಕಾ ಈ ಕತ್ತೆಯ ರಾಗ ? ಎನಗೆ ಅನುಮಾನ !!!

✍ ಕೆ.ಜಿ. ಶಶಿಕಲಾ ಗಿರೀಶ್, ಕಿಗ್ಗಾಲು

ಕುಂಬಾರ ಭಾಷೆ

# ರೈತ ಕುಂಬಾರ



ಮಣ್ಣ್‌ಲಿ ಹುಟ್ಟಿದ್
ಮಣ್ಣ್‌ಲಿ ಬೆಳ್ದ್
ಈ ಭೂಮಿ ತಂಪಾಯಿದ್
ಎಲ್ಲಿಯೂ ಅಂಜದೆ ಬಾಳ್ತೊ
ಈ ರೈತ ಸಂಗಾತಿ

ಕೆಲಸ ಎಲ್ಲಿಯಾದಡೇನು ?
ಕೆಲಸ ಯಾವುದಾದಡೇನು ?
ಮನಸ್ಸೊಂದಿದ್ದಡೆ ಸಾಕ್
ಎಲ್ಲೋರ್ ಮುಂದೆ ಸಾಗ್ತ್‌ತ್
ಈ ನೆಲ್ಮೆಯ ಬದ್ಕ್

ಮಣ್ಣ್ ಮಣ್ಣ್ ಮಣ್ಣ್
ಇಲ್ಲಿ ಬೆಳ್ದ ರೈತ ಹೊನ್ನ್
ಜೀವ ಕಷ್ಟನಾದಡೇನು ?
ಸದಾ ಚಿಂತೆಲಿ ಮುಂದೆ
ಕಾರ್ಯವ ನಡೆಸ್ತ

ಹನಿಹನಿ ಬೀಳ್ತೊ ಮಳೆ
ಸುತ್ತಲೂ ಬೆಳ್ದೊ ಪರಿಸರ
ಹಕ್ಕಿಗಳ ಚಿಲಿಪಿಲಿ ಸದ್ದ್
ಅರಿವಿಲ್ಲದೆ ಈ ಬಾಳ್‌ಲಿ
ಎಲ್ಲರ ಪ್ರೀತಿ ಸಿಗೇಲಿ

✍ ಎಚ್.ವಿ. ಸುನಿತಾ ವಿಶ್ವನಾಥ್, ಬೆಟ್ಟಗೇರಿ

ಬ್ಯಾರಿ ಭಾಷೆ

# "ಮನಸ್ಸ್‌ರೊ ಗೆಂದ"

ಮಡಿಕೇರಿಲ್ ವರ್ಷಯಿಡಿ ನಲ್ಲೊ ಮಳೆ
ಆವೋನು
ಕಾವೇರಿ ಒಲ್ಗಿಟ್ ಕನ್ನಂಬಾಡಿ
ನೊರೆಯೊನು
ರಾಜ್ಯತ್ತೊ ರೈತಮಾರೊ ಬೆಲೆ ಜಿಲ್ಲಾ
ಬೆಲೆಯೊನು

ಮಲ್ಲಳ್ಳಿ, ಅಬ್ಬಿಪಾಲ್ಸ್‌ಡೊ ಪಾಲ್ ನೊರೆಡೊ
ಮಂಢ
ಬಾಣೆ ಗುಡ್ಡೆ ಮಞ್ಞಿಲ್ ನೋಕೊಗು
ಚೆಂದ
ಪರ್‌ದೇಶತೊ ಆಲ್‌ಮಾರೊ ಮನಸ್ಸರೇಗೆಂದ

"ಆಯೆಂಗುಂ"
ಕೊಡಗ್‌ಡಜಿಲೊ ಕಷ್ಟ ಆರ್‌ಗುಂ
ಕಾಂಡಿಲ್ಲೆ
ರೈತಮಾರೊ ನಷ್ಟತ್ತೆ ಆರುಂ
ಕನಕಾಕ್‌ಲ್ಲೆ
ಮಳೆ ಕಾತ್‌ರೊ ರಭಸತ್ತ್‌ಗ್ ಕೃಷಿ ಪನಿ
ನಡಕ್ಕ್‌ಲ್ಲೆ

ಸರಕಾರ ತನ್ನೆಂಗುಂ
ವಿಶೇಷ ಪ್ಯಾಕೇಜ್
ಜಿಲ್ಲೆಗ್ ಎತ್ತುಂಬೊ
ಅವುಡವುಡೇ ಲೀಕೇಜ್
ಪೂರ್ತಿಯಾಯೋ ಪನಿಯೆಲ್ಲಾ
ಆವುಡಲ್ಲೆ..................ಡ್ಯಾಮೇಜ್

✍ ಅಬ್ದುಲ್ಲ, ಮಡಿಕೇರಿ

## English Poem

### "SAVE US"



**O**h my elders,
Brothers, sisters,
And my parents,
"Close the Open Bore Wells
Save children's lives"

"We are the innocents,
We are the coming brilliants"
Today we may be children
But tomorrow's citizens of india
Save us from Open Bore Wells ;

We are reading, writing
Eating, dancing and sleeping,
We are playing, jumping and running
Lastly dipping in the Open Bore Wells
Save us from Open Bore Wells

✍ **Inchara M.S, Madikeri**

## ಮರಾಠಿ ಭಾಷೆ ಕವನ

# ವಾಯಟ ಲೋಕಾಚ ನಜರ



ಗಾಂಧೀಜಿ ಬೋಲೂನ ಮ್ಯಾಲ
ಕಾಯಮನ್ ಬೋಲ್ಲತ್ರ
"ರಾತೀ ಬಾರಾವಾಸ್ತಾ ಕೋಂಚಿ ಬಾಯಕೋ
ಆರಾಮಕಣ್ಣಾ ಫಿರತೀ ತವಾ ಅಮ್ಚ್ಟಾ ದೇಶ್
ಸ್ವಾತಂತ್ರ ಹೋಲ್ಯಾಲ ಸಾರ್ಥಕಮ್ನ
ಅಂತಾ ರಾತಿ ನ್ಹವ ದುಪ್ಪಾರೀಚ
ಏಕಾ ಬಾಯಿ ಫಿರಾಲಾ ಬಿಚಕ್ಯಾಲಾಯ್!
ಧಾಕ್ಲಿ ಪೋರಗೀಸೂನ ಮರ್ತ್ಯಾಲೀ ಮಾಥಾರೀಲಾ
ಸೋಡತನಶ್ಯತ್ಯಾಲಿ ವಾಯಿಟ ಲೋಕ ಅತಾ ಜಲಮ್ಲೇತ|
ಕುಟಭೀ ಬಾಯಿತೆನೆ ಖಿಷಿನ ನಹಿತೆ...
ಶಾಳಾಮದೀ, ಆಫೀಸಮದಿ, ಬಸ್ಸಾಮಂದಿ
ಜಂಗ್ಲಾ ಮಂದಿ, ಸ್ವತಃ ಘರಾಮಂದಿ
ಕೂಟಬೇಕ ತಿತ್ತ ದುಶ್ಯಾಸನ ತೇನೆ ಆನಿ
ರಾವಣಾಸೂರ ತೆನೇಚ ಭರ್ಲೇತ...!
ಹೆಂಬ್ಯಾಕಣ್ಣಾ ಗಾವ ದೇಶ ನಾಶಲ್ಲಾಯ|
ಜೀವನ ನಾಸಕ ರತ್ಯಾಲಿ ಲೋಕಾಲಿ
ದೇವ ಶಿಕ್ಷಾಚ ದೇನಾ...?
ಅಸೀಚ ಚೇಲತ್ರ ಪುಡ ಲೋಕ-ಬಾಯಕೋ,
ಮಾಯ, ಭೈನ ಬೋಲತ್ಯಾಲ ಒಳಕ ಸಾಪಡತನಾ೧
ಸರ್ವನಾಸ ಕರತ್ಯಾಲ ಹೇ ಲೋಕಾಲೀ
ದೇವಚ ಲೊಟ್ಟ ಶಿಕ್ಷಾ ದೇವೂನ ಸಗಳೀ
ಲೋಕಾಲಿ ಉದ್ಧಾರ ಕರೂಂದೆ ||2||

✍ ಎಚ್. ಭೀಮರಾವ್ ವಾಷ್ಮರ್, ಮಡಿಕೇರಿ

**ಮಕ್ಕಳ ಕವನ**

# ನಮ್ಮೂರ ದಸರಾ



ಮರಳಿ ಬಂದಿದೆ ದಸರಾ
ಮನದಿ ಬಣ್ಣದ ಚಿತ್ತಾರ
ಮಡಿಕೇರಿ ಬಲು ಸುಂದರ
ಮೆರೆಯೆ ಬೆಳಕಿನ ಹಂದರ||

ಕರಗ ದೈವದ ಆಟ
ಜನಸಾಗರಕೆ ರಸದೂಟ
ಹತ್ತು ತೇರಿನ ಸಾಲು
ನೋಡಿ ದಣಿಯದು ಕಾಲು||

ಕೊನೆಯಾಯ್ತು ರಾವಣ ವಿಹಾರ
ರಾಮ ಮಾಡಿದ ದುಷ್ಟ ಸಂಹಾರ
ಪಾಂಡವರ ಶುಭ ಗೆಲುವು
ವಿಜಯದಶಮಿಯ ವರವು||

ಎತ್ತ ನೋಡಿದರತ್ತ ಕೇಕೆಗಳ ಸದ್ದು
ಸಂಭ್ರಮಕೆ ನಾಂದಿಯಿದು ಸುಡುವ ಸಿಡಿ ಮದ್ದು
ರಂಗ ಮಂದಿರದಲ್ಲಿ ನೂಪುರ ನಿನಾದ
ಇಲ್ಲ ಎಲ್ಲೆಲ್ಲಿಯೂ ಭೇದವು, ವಿವಾದ||

ಕಣ್ಣು ಕುಕ್ಕಿತು ರಾತ್ರಿ ಅಂಗಡಿಯ ಸಾಲು
ನೇತು ಹಾಕಿದ ಅಂಗಿ ಬಣ್ಣಗಳ ಮಾಲು
ಭಾವೈಕ್ಯತೆಯ ಸಾರ್ವುದಿದು ನಾಡಹಬ್ಬ
ಎಂಥ ಸೊಬಗಿನ ದೃಶ್ಯ ಏನಿದಬ್ಬಬ್ಬಾ!!!

✍ ಶ್ರೀಜಾ ದಯಾನಂದ ಕೊಟ್ಟಕೇರಿಯನ
ಮಡಿಕೇರಿ.

# ನನ್ನ ಕವನ




ಆಕಾಶ ಎಂಬ ಪುಟದಲ್ಲಿ ಬರೆದಿಡಲು ನನ್ನ ಕವನ
ಹಾರುವ ಹಕ್ಕಿ ಓದಿ ಎಲ್ಲಾ ಕಡೆ ಸೇರಲಿ
ವೇಗವಾಗಿ ಬರುತ್ತಿರುವ ಬಿರುಗಾಳಿಯು ತಣ್ಣಗಾಗಲಿ
ಪ್ರತಿ ಅಕ್ಷರದ ಸುಗಂಧ ಎಲ್ಲಾ ಕಡೆ ಹರಡಲಿ

ಅಲೆಗಳೆಂಬ ಕಾಗದದಲ್ಲಿ ಬರೆದಿಡಲು ನನ್ನ ಕವನ
ಈಜಾಡಲು ಜಲಚರಕ್ಕೆ ಮನ ಉಲ್ಲಾಸ ನೀಡಲಿ
ನಾ...ಬರೆದ ಕವನ ಹೊಳೆಯಲ್ಲಿ ಹರಿಯಲಿ
ಕಾಶ್ಮೀರದಿಂದ ಕನ್ಯಾಕುಮಾರಿಯವರಿಗೆ ಸಾರುತ್ತ ಮುಂದೆ ಸಾಗಲಿ

ನಾ ಬರೆದಿಡುವೆ ಕವನವನ್ನು ನೇಸರದ ಎದೆಯಲ್ಲಿ
ಅದರ ಪ್ರಕಾಶಮಾನತೆ ಎಲ್ಲಾ ಕಡೆ ಚಿಮ್ಮಲಿ
ನಾ ಬರೆದಿಡಸಲು ಕವನವನ್ನು ಚಂದ್ರನ ಎದೆಯಂಗಳದಲ್ಲಿ
ಮಲಗುವ ಮಗುವಿಗೆ ಜೋಕಾಲಿ ಹಾಡಲಿ
ತಂಪಾದ ಗಾಳಿ ನಾ ಬರೆದಿಟ್ಟ ಕವನವನ್ನು ತಣ್ಣಗಿರಿಸಲಿ

✍ ಪವನ್ ಟಿ. ಎಸ್., ಮಡಿಕೇರಿ.



## ಹಣತೆ



ಹೊನ್ನ ಹಣತೆ, ಮಣ್ಣ ಹಣತೆ
ಬಯಸಿ ಬಂದ ಹಣತೆ
ಜಗವ ಬೆಳಗೋ ಪುಟ್ಟ ಹಣತೆ
ಮಿಣುಕಿ ಮಿಣುಕಿ ಬೆಳಕ ಚೆಲ್ಲಿ
ನಿನ್ನ ಚೆಲುವ ಚೆಲ್ಲಿದೆ

ಕತ್ತಲಾದರೆ ಹೊತ್ತಿ ಉರಿವ
ಗಾಳಿ ಬಂದರೆ ಮೋಜು ಮಾಡುವ
ಪುಟ್ಟದಾದ ಪಣತಿ ಹಣತೆ
ಹೊತ್ತಿ ಹೊತ್ತಿ ಸಾಲುಗಟ್ಟಿ
ಹಗಲು ಇರುಳು ಬಿಡದೆ ಬೆಳಗು

ಬಾಂಧವ್ಯದ ಬೆಸುಗೆಯಲಿ
ಬೆರೆತು ನಗು ಹಣತೆ
ನುಡಿ ಮುತ್ತು ಪೋಣಿಸಿ
ಪರಿಣತಿಯ ಪರಿಪಾಲಿಸಿ
ನೀ ಬೆಳಗು ಬೆಳಕ
ಹೊನ್ನ ಮಣ್ಣ ಹಣತೆ

ಕಾವ್ಯ ಸಿ. ಪಿ., ಬೆಟ್ಟಗೇರಿ.

# ಎಳೆಯ ಮನಸುಗಳು



ಓದುವ ವಯಸಲಿ
ಆಡುವ ಆಸೆಯಲಿ
ಬೆವರನು ಸುರಿಸುತ
ಬತ್ತಿದ ಹೊಟ್ಟೆಗೆ ಅನ್ನದ ಕೊರತೆಗೆ
ಎಳೆಯ ಕೈಗಳು ದುಡಿಯುತಲಿ

ಹಬ್ಬ ಹರಿದಿನಗಳಿಲ್ಲ
ಹೊಸ ಬಟ್ಟೆಗಳಿಲ್ಲ
ಹುಟ್ಟು ಹಬ್ಬದ ಸಂಭ್ರಮವಿಲ್ಲ
ಹಸಿವು ಇಂಗಿಸಲು
ಎಳೆಯ ಮನಸುಗಳು
ನೊಂದು ದುಡಿಯುತಲಿ


ನಿನ್ನೆ ನಾಳೆಗಳ ಚಿಂತೆಯಿಲ್ಲ
ಅಬ್ಬರವಿಲ್ಲ, ಆಡಂಬರವಿಲ್ಲ
ಜೀತದ ಆಳಾಗಿ ಕೂಳಿನ ಬಾಳಿನ
ಉದರ ಸಮಾಧಾನಿಸಲು
ದುಡಿಯುತಲಿ ಎಳೆಯ ಕೈಗಳು!

ತಪ್ಪೆ ಇಲ್ಲದ ಕಂದಮ್ಮಗಳು
ನರಳುವದೇಕೆ ಬಡತನ ಪಟ್ಟದಲಿ
ವಿದ್ಯೆ ಕಲಿಯುವಾಸೆ ಅವರಲಿ
ನೋವು ತುಂಬಿ ಕಂಗಳಲಿ
ತೊಲಗಿಸೋಣ ಬಾಲಕಾರ್ಮಿಕ ಪದ್ಧತಿ
ಸೇರಿಸೋಣ ಉಚಿತ ಸರ್ಕಾರಿ ಶಾಲೆಗೆ
ರಮಿಸೋಣ ಕನಸಿನ ಬಾಳಿಗೆ
ಸುಂದರ ನಾಳೆಗಳನ್ನು.....

✍ ಕತಜ್ಞಾ ಬೆಸೂರು

ಮಲಯಾಳಂ ಕವನ

# ಎನ್ಡೆ ಅಗತ್ತೇಕ್ಕ್ ಕಯರುಂಬೋಳ್



ಕಾಲಿಂಗ್ ಬೆಲ್ ಇಲ್ಲೆಂಗಿಲುಂ
ಎನ್ಡೆ ವಾರಿಯೆಲ್ಲ್ ತಟ್ಟಿಯಾಲ್ ಮದಿ
ಞಾನ್ ವಾದಿಲ್ ತುರಕ್ಕುನ್ನು

ಮೊಟ್ಟಾವುನ್ನ, ವಿಡರುನ್ನ
ಎಲ್ಲಾಂ ಹೃದಯಜಳ್ಕ್ಕುಂ ಒರೇ ಒರು ನಿರಂ
ಎನ್ಡೆ ವೀಟ್ಟಿಲ್ ಪೈಂಟರ್ ಪುರಟ್ಟಿಯದುಂ ಅದೇ ನಿರಂ

ಎನ್ಡೆ ಕುಡಲಿನ್ಡೆ ಪಾಯ್ ವಿರಿಕ್ಕುನ್ನು
ನಿಜ್ಞಳ್ ಅದಿಲ್ ಇರಿಕ್ಕುಗ, ವಿಶ್ರಮಿಕ್ಕುಗ
ತಲಚ್ಚೋರ್, ಹೃದಯಂ, ರಕ್ತತಿನೆ ಕುರಿಚ್ಚ್
ಚರ್ಚ ನಡತ್ತುಗ


ಎನ್ಡೆ ವೀಟ್ಟಿಲೇಕ್ಕ್ ಪ್ರೂಟ್ಟ್ ಇಲ್ಲ
ನಿಜ್ಞಳ್ ಎಪ್ಪೋಯೆಂಗಿಲುಂ ವರಾಂ
ಮಯಕಾಲತ್ತ್ ತಗರ್ನ್ನ್ ವೀಣಾಲ್
ಮಣ್ಣಿನ್ಡೆ ಅಗತ್ತ್ ಎನ್ಡೆ ವೀಡ್
ಅವಿಡೆ ನಗಂ, ರೋಮಂ, ಎಲ್ಲಿನೆ ಪಟ್ಟಿ
ಚರ್ಚ ಚೆಯ್ಯುಗ

ಎನ್ಡೆ ವೀಡಿಂಡೆ ಅಗತ್ತುಳ್ಳ ಸ್ನೇಹಂ
ಏದ್ ಮಯ, ಏದ್ ಕಾಟ್ಟಿಲುಂ ತಗರುನ್ನದಲ್ಲ
ಕಾಲಿಂಗ್ ಬೆಲ್ ಇಲ್ಲೆಂಗಿಲುಂ
ಕಾಟ್ಟಿನ್ಡೆ ವಾದಿಲ್ ಮುಟ್ಟಿ ಅವಿಡೆತ್ತೇಕ್ಕ್ ವರುಗ

✍ ಕಾಜೂರು ಸತೀಶ್, ಕರಿಕೆ

ತೆಲುಗು ಕವನ

# ನೇನು ಚೆಪ್ಪ ಕೋವಡನಿಕಿ...!



ನೀಕೈ ನೇನುನ್ನಾನನಿ,
ನೀಕೋಸಂ ನೇನು ವಸ್ತಾನನಿ,
ನೀತೋನೇ ಉಂಟಾನನಿ,
ನುವ್ವಿಚ್ಚಿನ ಆ ಮಾಟ, ಓ ನೇಸ್ತಂ ಏನಾಟಿ ನೀ ಟಿ ಮೂಟ!

ನನ್ನು ನಮ್ಮಿಂಚಡಣ ನೀನೇರ್ಪು
ನಿನ್ನು ನಮ್ಮಡಂ ನಾ ತಪ್ಪು
ದೇವುಡು ನಾಕಿಚ್ಚಿನ ಶಾಪಂ...ಈ ಓರ್ಪು...!
ಅಂತ್ಯ ಪ್ರಾಸಾಲ ಆನಂದಂ ಕಾದಿದಿ
ಅತಿವಾದಪು ಆಲಾಪನ ಕಾದಿದಿ
ಅಶ್ರುವುಲಲೋ ಆವಿರೌತುನ್ನ ಓ ಅತಿವ ಆವೇದನ ಇದಿ!

ಈ ಆವೇದನ ನನ್ನು ಕಾದು ನೇಸ್ತಂ,
ಈ ಆವೇದನ ನನ್ನು ರಗಿಲ್ಚೇನಿ,
ಮೃತ್ಯುವುಕೈ ಘೋರಾಟಂ ಕಾದಿದಿ ನೇಸ್ತಂ,
ಬ್ರತುಕು ಪೋರುಕೈ ನಾ ಆರಾಟಂ||

ಪರಿಕಿತನಪು ಪಾಲು ಪಟ್ಟೆ ಪಶುವುನು ಕಾನುನೇನು,
ಪೋರಾಟಪು ಪ್ರೇರಣೈ ನಿಲಿಚಿನ ಪತಾಗ್ನಿನೇನು,
ಮತಿ ಚಲಿಂಚಿ ಕಾದು ನೇಸ್ತಂ
ಮದಿ ಚಲಿಂಚಿ ವಸ್ತುನ್ನಾಯಿ ಮಾಟಲು|

ತಲ್ಲಿನ್ನೈ, ಚೆಲ್ಲಿನ್ನೈ, ಇಲ್ಲಾಲಿನ್ನೈ ನಿನ್ನು ನಡಿಪಿಂಚಿ
ನೀತೋ ನಡಚಿನ ರೋಜುಲು ಮರಿಚಾವಾ?
ನುವ್ವು ಕಾದನುಕುಂಟೆ ನಾಕು ಬ್ರತುಕೇ ಲೇದಂಟಾನೇನೋ
ನೇನು ವದ್ದನುಕುಂಟೆ ನೀಕು ಪುಟ್ಟುಕೇ ಲೇದು!
ನೇನು ನೀ ಬಾನಿಸನು ಕಾನು ನೇಸ್ತಂ
ನೀ ಸರಸರ ನಿಲ್ಚಿ ಪ್ರಪಂಚಾನ್ನಿ ಪರಿಪಾಲಿಂಚಡಾನಿಕಿ
ಅವತರಿಂಚಿನ ಅರ್ಧನಾರೀಶ್ವರುನಿ ನಾರಿನಿ ನೇನು.
ಇದಂತಾ ಪಿಚ್ಚಿ ಪ್ರಲಾಪನ ಅಂಟಾವಾ
ಅಯಿನಾ, ಈ ನಾ ಕವಿತ,
ನುವ್ವು ಒಪ್ಪುಕೋವಡಾನಿಕಿ ಕಾದುನೇಸ್ತಂ.
ನೇನು ಚೆಪ್ಪು ಕೋವಡಾನಿಕಿ.

✍ ಸಬಲಂ ಬೋಜಣ್ಣ ರೆಡ್ಡಿ, ಕುಶಾಲನಗರ.



ಕೊಂಕಣಿ ಕವನ

# ಮೊಗಾಳ್ ಪಾವ್ಸಾ...



ಜೀವ್ ಸಂಕುಲಚ್ಯಾ ಗರ್ಜೆಚ್ಯಾ ಮೊಗಾಚ್ಯಾ ಪಾವ್ಸಾ,
ಬಿಜ್ಹುಯ್‌ನಾಕಾ ಮ್ಹಕಾ ಅಯ್ಲ್ಯಾ ದೀಸಾ.
ಇಲ್ಲೊ ಇಲ್ಲೋ ಶೆಣಾವ್ನ್ ಯೇ ಪಾವ್ಸಾ,
ಮ್ಹಜ್ಯಾ ಕುಡೀಕ್ ಥಂಡ್ ಹಾಡಿನಾಕಾ ಹ್ಯಾ ಉಲ್ಲಾಸಾಚಾ ದಿಸಾ.

ವೇಳ್ ಸಾಂಗ್ಚಾ ಮೊಟಾ ಮೊಗಾಚಾ ಗಡಿಯಾರ,
ಕೆದ್ನಾ ತುಂ ಉತರ್ತಾಯ್‌ಂ ವೊರಾ ಬಾರಾಂ
ಫುಲ್ ತುಂ ವೆಗಿಂ ವೆಗಿಂ ತುಜಿ ಮೆಟಾ,
ಸೂರ್ಯೊ ಆನಿ ಚೆಂದ್ರ್ವೆಗಿಂಚ್ ತುಮಿಂ ಉಟಾ.

ಸಂಚೆಚ್ಯಾ ಚಾರ್ ವ್ಹರಾರ್,
ಮೆಳೊಂವ್ಕ್ ಆಸಾ ಸಾಂಗಾತಿಕ್ ತ್ಯಾ ಪಾರ್ಕಾರ್.
ಹಾಡ್ತಾ ತೇಂ ಭೋವ್ ಸಂತೋಸ್
ವಿಸ್ರೊಂವ್ಕ್ ನಾ ಮ್ಹಕಾ ಹೋ ದೀಸ್.

ಅಯ್ಲ್ಯಾ ಮೊಜ್ಯಾ ಸಾಂಗಾತಿ ಆತಾಂ,
ಘರಾ ವೊಸೊಂವ್ಕ್ ತಾಕಾ ವೇಳ್ ಜ್ಹಾತಾ
ಯೇ ಪಾವ್ಸಾ, ತುಂ ವೆಗಿಂ ಪೆಗಿಂ ಯೇ
ಬಿಜ್ಹೊಂವ್ನ್ ಅಮ್ಕಾ ಥಂಡ್ ಕರುಂಕ್ ಯೇ.

ಟಿಕ್ ಟಿಕ್ ಕರ್ಚಾ ಅಂಚ್ಯಾ ಗಡಿಯಾರ್,
ತುಜ್ಯಾ ಪಯ್ಣಾರ್ ಆಸೊಂದಿ ಅಮ್ಕಾ ಸಹಕಾರ್.
ಅಮಿ ಆಶೆತಾಂವ್ ಏಕಾ ಮೆಕಾ ಪೊಳೆವ್ನ್ ಕಡ್ಟೊ ತೊಡೊ ವೇಳ್,
ತುಂ ಕಡ್ನಾಕಾ, ತುಜಂ ಮೆಟಾ ಸಾಂಗೊವ್ನ್ ಜ್ಹಾಲೋ ವೇಳ್.

✍ ಚಾರ್ಲ್ಸ್ ಡಿಸೋಜ, ವೀರಾಜಪೇಟೆ.

# बीरीश का वह दिन ।



बीरीश का वह दिन बहुत प्यारा ।
यह कावारी कि धरती है ।
नदि के रूप में बहाति है दिन सारा ।

यह आषाढ का महीना ।
बीरीश होता है तीन महीना ।
यहाँ की पहाड आसमान को छूते है ।
सूरज की किरण धरती को समाते है ।

वह देसो फूलों कि खुशबू प्यार चली ।
दरवाजें खिडकियों खुलने लगी गली ।
कभी कभी बीरीश होता है प्यारा ।
बीरीश का वह दिन बहुत प्यारा ।

✍ **M.A. Manoj, Madikeri**



# ಕಾವ್ಯಧಾರೆಯಲ್ಲಿ...

ಸ್ಮಿತಾ ಅಮೃತರಾಜ್, ಸಂಪಾಜೆ

*"ಹಸಿರು" ಬಾಲಂಬಿ ಅಂಚೆ, ಚೆಂಬು ಗ್ರಾಮ, ಮಡಿಕೇರಿ.*

ಅಮ್ಮಣಿಚಂಡ ಪ್ರವೀಣ್ ಚಂಗಪ್ಪ,

ಕೊಟ್ಟೋಳಿ ಗ್ರಾಮ, ಕೆ. ಬೋಯಿಕೇರಿ ಅಂಚೆ, ವೀರಾಜಪೇಟೆ

ಮಿಲನ ಕೆ. ಭರತ್

*ಭಾಗಮಂಡಲ.*

♥♥♥♥

ಕಾವ್ಯ ಎ. ಎಸ್.
D/o ಸುಬ್ರಮಣ್ಯ ಎ. ಆರ್.
ಭಾಗಮಂಡಲ ಅಂಚೆ ಮತ್ತು ಗ್ರಾಮ.
Mobil - 9483843745.

ಶ್ರೀಮತಿ ಸ್ನೇಹಾ ಬಸಮ್ಮ ಅಧ್ಯಾಪಕರು
ಬೆಸೂರು ಗ್ರಾಮ ಮತ್ತು ಅಂಚೆ
ಕೊಡ್ಲಿಪೇಟೆ
Mobil - 9008878616

ಎನ್. ಎಸ್. ಮಹೇಶ್
S/O ನಂಜುಂಡ
ಕೂಡ್ಲೂರು ಚೆಟ್ಟಳ್ಳಿ, ಗ್ರಾಮ ಮತ್ತು ಅಂಚೆ
Post Box -25
ಸೋಮವಾರಪೇಟೆ.
Mobil - 8277235246

ಡಿ. ಸುಜಲದೇವಿ
ಸುಪ್ರಜ ಗುರುಕುಲ-ಶನಿವಾರಸಂತೆ
ಸೋಮವಾರಪೇಟೆ
Mobil - 9480376479
9141612556

ಸುನೀತಾ ಎಚ್. ಟಿ.
ಸಹ ಶಿಕ್ಷಕಿ
ಜಿ. ಎಂ.ಪಿ.ಎಸ್. ಕಕ್ಕಬ್ಬೆ
ಕಕ್ಕಬ್ಬೆ ಅಂಚೆ
Mobil - 9008583684

ಸಹನಾ ಕಾಂತಬೈಲು
ಬಾಲಂಬಿ ಅಂಚೆ
ಮಡಿಕೇರಿ
Mobil - 9008196522

ಶೈಲಜ ದಿನೇಶ್
ತಾವೂರು, ಬಾರಿಕೆ ಮನೆ
ಭಾಗಮಂಡಲ ಅಂಚೆ
571247

ಸೌಮ್ಯ ಶೆಟ್ಟಿ, ಬಿ. ಬಿ.
W/O ಸದಾಶಿವ ರೈ ಪಿ. ಕೆ.
ಭಗವತಿ ನಗರ, ಮಡಿಕೇರಿ.
Mobil - 9448793465

ನರಿಯೂರು ಎಲ್. ದಯಾನಂದ.
ಪ್ರಥಮ ದರ್ಜೆ ಸಹಾಯಕರು,
ಸ.ಪ್ರ.ದ ಕಾಲೇಜು,
ವೀರಾಜಪೇಟೆ.
Mobil - 9611329090- 8277167074

ಶ್ರೀಮತಿ ಶಾಂತಶೀಲ
ಶಿಕ್ಷಕಿ, ಹಟ್ಟಿಹೊಳೆ
Mobil - 9986267556
9482978326

ನ. ಲ. ವಿಜಯ
S/O ದಿ. ಬಿ. ಎಸ್. ಲಕ್ಷ್ಮಣ
ಮನೆ ನಂ. X 130
ಮಹದೇಶ್ವರ ಬ್ಲಾಕ್
ಸೋಮವಾರಪೇಟೆ.
Mobil - 7406649277

ಶ್ರೀಮತಿ ಹೇಮಾಲತಾ ಪೂರ್ಣಪ್ರಕಾಶ್
ಬೆಟ್ಟಗೇರಿ ಗ್ರಾಮ ಮತ್ತು ಅಂಚೆ
ಮಡಿಕೇರಿ.
Mobil - 9945966749

ಎಂ. ಪಿ. ಪುಷ್ಪಲತ ಶಿವಪ್ಪ,
ಕೆ. ಬೋಯಿಕೇರಿ
ವೀರಾಜಪೇಟೆ
Mobil -9901212740

ಕಿಗ್ಗಾಲು ಬಿ. ಹರೀಶ್, ಮೂರ್ನಾಡು
ಅಂಚೆ ಪೆಟ್ಟಿಗೆ ಸಂಖ್ಯೆ 23
ಮೂರ್ನಾಡು ಅಂಚೆ, ಕೊಡಗು
ph : 08271 321551
Mobil - 8088843936

ಕಿಗ್ಗಾಲು ಎಸ್. ಗಿರೀಶ್
ಅಂಚೆ ಪೆಟ್ಟಿಗೆ ಸಂಖ್ಯೆ 23
ಮೂರ್ನಾಡು ಅಂಚೆ, ಕೊಡಗು
ph : 08271 321551
Mobil - 9141395426

ಶ್ರೀಮತಿ ಪಾಲೆರ ರಾಣಿ ಅಪ್ಪಣ್ಣ
ಪೇರೂರು ಗ್ರಾಮ
ಬಲ್ಲಮಾವಟಿ -571214
Mobil - 8861417557

ಕಾಳಿಮಾಡ ಮಮತ ಜಿನ
ಕೊಡಗು ವಿದ್ಯಾಲಯ,
ಮಡಿಕೇರಿ

ನಳಿನಾಕ್ಷಿ ಎಂ.ಕೆ.
ಜೂನಿಯರ್ ಕಾಲೇಜ್ ಹತ್ತಿರ
ಚಿಕ್ಕಪೇಟೆ, ವೀರಾಜಪೇಟೆ
9611018818

ನಂಬಿಯಪಂಡ ರಂಜು ನಾಣಯ್ಯ
ಬೆಂಗಳೂರು
9845578971-9448700630

ಕರವಟ್ಟಿರ. ಬಿ. ಐಯ್ಯಣ್ಣ
ಚೆನ್ನಯ್ಯನಕೋಟೆ
9845673952

ಕೊಟ್ಟುಕೇರಿಯನ ಲೀಲಾ ದಯಾನಂದ
ಮಡಿಕೇರಿ
ಮೊ:9449858586

ರಂಜಿತ್ ದಾಮೋದರ್ ಕುದುಪಜೆ
ತಣ್ಣಿಮಾನಿ, ಭಾಗಮಂಡಲ
ಮೊ: 9480732576

ಕಡ್ಲೇರ ತುಳಸಿ ಮೋಹನ್
ಬೆಟ್ಟಗೇರಿ ಗ್ರಾಮ ಮತ್ತು ಅಂಚೆ
ಮಡಿಕೇರಿ
ಮೊ : 9483110940

ಪರಿಚನ ತೇಜಸ್ವಿನಿ ಕಿರಣ್
ಪ್ರೌಢ ಶಾಲಾ ಶಿಕ್ಷಕಿ
ಸ.ಪ.ಪೂ. ಕಾಲೇಜು, ಮಡಿಕೇರಿ
ಮೊ : 9663254829

ಕಡ್ಲೇರ ಜಯಲಕ್ಷ್ಮಿ
W/O ಮೋಹನ್‌ಕುಮಾರ್
ಬೆಟ್ಟಗೇರಿ ಗ್ರಾಮ ಮತ್ತು ಅಂಚೆ, ಮಡಿಕೇರಿ
ಮೊ : 9686498155

ರಮ್ಯ ಕೆ.ಜಿ
ಶಿಕ್ಷಕಿ, ಸ.ಹಿ.ಪ್ರಾ. ಶಾಲೆ
ಕೋಡಂಬೂರು ಗ್ರಾಮ, ಮೂರ್ನಾಡು
ಮೊ : 9663946585

ಬಿ.ಎಸ್. ಸತೀಶ್ ಸೋಮಪ್ಪ ನಾಕೂರು
ಕಾನ್ ಬೈಲ್ ಅಂಚೆ, ಸುಂಟಿಕೊಪ್ಪ
ಮೊ :9481114557

ಸುನಿತಾಲೋಕೇಶ್
ಕುಶಾಲನಗರ
9538150488

ಕೆ.ಜಿ. ಶಶಿಕಲಾ ಗಿರೀಶ್
ಕಿಗ್ಗಾಲು ಗ್ರಾಮ, ಮೂರ್ನಾಡು
ಮೊಬೈಲ್: 9141367104

ಎಚ್.ವಿ. ಸುನಿತಾ ವಿಶ್ವನಾಥ್
ಬೆಟ್ಟಗೇರಿ ಗ್ರಾಮ ಮತ್ತು ಅಂಚೆ
9591781147

ಅಬ್ದುಲ್ಲ
ತ್ಯಾಗರಾಜ ನಗರ, ಮಡಿಕೇರಿ
9844066582

ಇಂಚರ ಎಂ.ಎಸ್
6 ನೇ ತರಗತಿ
ಕೇಂದ್ರ ವಿದ್ಯಾಲಯ, ಮಡಿಕೇರಿ
ಮೊ : 9449405609

ಕಾವ್ಯ ಎ. ಎಸ್.
D/o ಸುಬ್ರಮಣ್ಯ ಎ. ಆರ್.
ಭಾಗಮಂಡಲ ಅಂಚೆ ಮತ್ತು ಗ್ರಾಮ.

ಶ್ರೀಮತಿ ಸ್ನೇಹಾ ಬಸಮ್ಮ ಅಧ್ಯಾಪಕರು
ಬೆಸೂರು ಗ್ರಾಮ ಮತ್ತು ಅಂಚೆ
ಕೊಡ್ಲಿಪೇಟೆ
Mobil - 9008878616

ಕಾವ್ಯಶ್ರೀ ಸಿ. ಪಿ.
6ನೇ ತರಗತಿ
ಉದಯ ಆಂಗ್ಲ ಮಾಧ್ಯಮ ಶಾಲೆ, ಬೆಟ್ಟಗೇರಿ

ಕೃತಜ್ಞಾ ಬೆಸೂರು
D/o ಸುರೇಂದ್ರ ಬಿ. ಎಸ್.
ಬೆಸೂರು ಗ್ರಾಮ
ಕೊಡ್ಲಿಪೇಟೆ ಹೋಬಳಿ
ಸೋಮವಾರಪೇಟೆ.

ಸಬಲಂ ಭೋಜಣ್ಣ ರೆಡ್ಡಿ,
ಕುಶಾಲನಗರ
ಮೊ. 9448326039

ಚಾರ್ಲ್ಸ್ ಡಿಸೋಜ
ವೀರಾಜಪೇಟೆ
ಮೊ.9741535835

ಎಚ್. ಭೀಮರಾವ್ ವಾಷ್ಟರ್
ಮಡಿಕೇರಿ.
9845309239

ಕಾಜೂರು ಸತೀಶ್
ಶಿಕ್ಷಕ, ಸ.ಹಿ.ಪ್ರಾ. ಶಾಲೆ, ಕರಿಕೆ ಕಾಲೋನಿ
ಮೊ.9483825215

ಎಂ. ಈ. ಮನೋಜ್
S/o ಎಂ. ಎ. ಈರಪ್ಪ
13/98ರಾಜಸೀಟು ಹತ್ತಿರ
ರೇಸ್‌ಕೋರ್ಸ್ ರಸ್ತೆ, ಮಡಿಕೇರಿ
ಮೊ.9482930531



# ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2014

**ಅಧ್ಯಕ್ಷರು**

ಕಾಯಪಂಡ ಶಶಿ ಸೋಮಯ್ಯ

**ಹೆಚ್.ಆರ್.ಎನ್. ಮೂರ್ತಿ**

ಪ್ರಧಾನ ಕಾರ್ಯದರ್ಶಿ

**ಸದಸ್ಯರು**

ಅಜ್ಜಮಾಡ ರಮೇಶ್ ಕುಟ್ಟಪ್ಪ, ಬಿ.ಸಿ. ದಿನೇಶ್, ಎಸ್.ಜಿ. ಉಮೇಶ್, ಎಂ.ಇ. ಮಹಮ್ಮದ್, ಕುಡೆಕಲ್ ಸಂತೋಷ್, ಜಗದೀಶ್ ಬೆಳ್ಯಪ್ಪ, ಜಿ.ವಿ. ರವಿಕುಮಾರ್, ಮಾದೇಟಿರ ಬೆಳ್ಯಪ್ಪ, ಲಕ್ಷ್ಮಿಪ್ರಸಾದ್ ಪೆರ್ಲ, ಕೆ.ಬಿ. ಮಂಜುನಾಥ್, ಪ್ರಸಾದ್ ಸಂಪಿಗೆಕಟ್ಟೆ, ಉಜ್ವಲ್ ರಂಜಿತ್, ಶ್ರೀಕಾಂತ್ ಕಲ್ಲಮ್ಮನವರ್, ಪುದಿಯನೆರವನ ರೇವತಿ ರಮೇಶ್.

**ಗೌರವ ಸಲಹೆಗಾರರು**

ಹೆಚ್.ಟಿ. ಅನಿಲ್, ಶ್ರೀಧರ್ ಹೂವಳ್ಳಿ
ಅಲ್ಲಾರಂಡ ವಿಠಲ್ (ಮಾಜಿ ಅಧ್ಯಕ್ಷರುಗಳು)

**ಜಿಲ್ಲಾಡಳಿತ ಸಲಹಾ ಸಮಿತಿ ಸದಸ್ಯರು**

ಉಪ ವಿಭಾಗಾಧಿಕಾರಿ, ಉಪ ವಿಭಾಗ, ಮಡಿಕೇರಿ
ಉಪ ಆರಕ್ಷಕ ಅಧೀಕ್ಷರು, ಉಪ ವಿಭಾಗ, ಮಡಿಕೇರಿ
ಜಿಲ್ಲಾಧಿಕಾರಿ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಮಡಿಕೇರಿ
ಜಿಲ್ಲಾ ಉದ್ಯೋಗಾಧಿಕಾರಿ, ಮಡಿಕೇರಿ
ಪೌರಾಯುಕ್ತರು, ನಗರಸಭೆ, ಮಡಿಕೇರಿ
ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಡಿಕೇರಿ

